# ಸಫರ್ ತಿಂಗಳು ಅಶುಭವಲ್ಲ

[ شهر صفر ليس بمشؤوم ]

**[Kannada – ಕನ್ನಡ – كنادي ]**


**ಮುಹಮ್ಮದ್ ಹಂಝಾ ಪುತ್ತೂರು**

**محمد حمزة بتوري**



www.islamhouse.com

**1436 – 2014**

## ಒಳಪುಟಗಳಲ್ಲಿ...

1. ಸಫರ್ ತಿಂಗಳು ಎಂದರೇನು? ಅದಕ್ಕೆ ‘ಸಫರ್’ ಎಂಬ ಹೆಸರು ಬರಲು ಕಾರಣವೇನು? 3

2. ಸಫರ್ ತಿಂಗಳ ವಿಷಯದಲ್ಲಿ ವರದಿಯಾದ ಹದೀಸ್‌ಗಳು 4

3. ಜಾಹಿಲೀ ಕಾಲದಲ್ಲಿ ಸಫರ್ ತಿಂಗಳು 13

4. ಶುಭ ಮತ್ತು ಅಶುಭವನ್ನು ನೋಡುವುದರಲ್ಲಿರುವ ಅಪಾಯಗಳು 24

5. ಸಫರ್ ತಿಂಗಳಲ್ಲಿ ವ್ಯಾಪಕವಾಗಿ ಆಚರಿಸಲಾಗುವ ಕೆಲವು ಬಿದ್‌ಅತ್‌ಗಳು 25

6. ಸಫರ್ ತಿಂಗಳಲ್ಲಿ ಜರುಗಿದ ಕೆಲವು ವಿಶೇಷ ಘಟನೆಗಳು 30

بِسْمِ اللهِ الرَّحْمَنِ الرَّحِيم

## ಸಫರ್ ತಿಂಗಳು ಎಂದರೇನು? ಅದಕ್ಕೆ 'ಸಫರ್' ಎಂಬ ಹೆಸರು ಬರಲು ಕಾರಣವೇನು?

ಸಫರ್ ತಿಂಗಳು ಹಿಜರಿ ಕ್ಯಾಲೆಂಡರ್‌ನ ಎರಡನೆ ತಿಂಗಳು. ಇದು ಮುಹರ್ರಮ್ ತಿಂಗಳ ನಂತರ ಬರುತ್ತದೆ.

ಇದಕ್ಕೆ 'ಸಫರ್' ಎಂದು ಹೆಸರು ಬರಲು ಕಾರಣವೇನೆಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ. ಕೆಲವರು ಹೇಳುತ್ತಾರೆ: "ಮಕ್ಕಾ ನಿವಾಸಿಗಳು ಮಕ್ಕಾವನ್ನು 'ಇಸ್ಫಾರ್' [إِصْفَار] ಮಾಡುವುದರಿಂದ ಇದಕ್ಕೆ ಈ ಹೆಸರು ಬಂದಿದೆ." 'ಇಸ್ಫಾರ್' ಮಾಡುವುದು ಎಂದರೆ ತೊರೆಯುವುದು. ಅಂದರೆ ಅವರು ಈ ತಿಂಗಳಲ್ಲಿ ಹಜ್ಜ್ ಮುಗಿಸಿ ಮಕ್ಕಾ ತೊರೆದು ಹೋಗುತ್ತಿದ್ದರು.

ಇತರ ಕೆಲವರು ಹೇಳುತ್ತಾರೆ: "ಈ ತಿಂಗಳಲ್ಲಿ ಅವರು ವಿವಿಧ ಗೋತ್ರಗಳೊಂದಿಗೆ ಯುದ್ಧ ಮಾಡಿ ಆ ಗೋತ್ರಗಳಲ್ಲಿರುವ ಸಂಪತ್ತು ಸಾಧನಗಳನ್ನು 'ಸಿಫ್ರ್' [صِفْر] ಮಾಡುತ್ತಿದ್ದುದರಿಂದ ಇದಕ್ಕೆ ಈ ಹೆಸರು ಬಂದಿದೆ." 'ಸಿಫ್ರ್' ಎಂದರೆ ಸೊನ್ನೆ. ಅಂದರೆ ಅವರು ಯುದ್ಧ ಮಾಡಿ, ಆ ಗೋತ್ರಗಳಲ್ಲಿರುವ ಸಂಪತ್ತು ಸಾಧನಗಳನ್ನು ವಶಪಡಿಸಿ ಬರಿದು ಮಾಡುತ್ತಿದ್ದರು. [ಲಿಸಾನುಲ್ ಅರಬ್ 4/462–463] [ನೋಡಿ: ಉಮ್ದತುಲ್ ಕಾರೀ ಶರ್ಹ್ ಸಹೀಹಿಲ್ ಬುಖಾರೀ 14/363]

## ಸಫರ್ ತಿಂಗಳ ವಿಷಯದಲ್ಲಿ ವರದಿಯಾದ ಹದೀಸ್‌ಗಳು

ಅಲ್ಲಾಹನ ಗ್ರಂಥ ಕುರ್‌ಆನ್‌ನಲ್ಲಿ ‘ಸಫರ್’ ಎಂಬ ಪದವು ಬಂದಿಲ್ಲ. ಆದರೆ ಅದರ ಬಗ್ಗೆಯಿರುವ ಪ್ರಸ್ತಾಪವು ಬಂದಿದೆ. ಅಲ್ಲಾಹು ತಆಲಾ ಹೇಳುತ್ತಾನೆ:

﴿ فَإِذَا انْسَلَخَ الْأَشْهُرُ الْحُرُمُ فَاقْتُلُوا الْمُشْرِكِينَ ﴾

**“ತರುವಾಯ ಪವಿತ್ರ ಮಾಸಗಳು ಸರಿದು ಹೋದರೆ ನೀವು ಮುಶ್ರಿಕರೊಂದಿಗೆ ಯುದ್ಧ ಮಾಡಿರಿ.”** [ಕುರ್‌ಆನ್ 9:5]

ಉಲಮಾಗಳ ಪೈಕಿ ಕೆಲವರು ಹೇಳುತ್ತಾರೆ:

إِنَّ الْمُرَادَ بِهِ أَشْهُرُ الْإِمْهَالِ ؛ عِشْرُونَ مِنْ ذِي الْحِجَّةِ وَالشَّهْرُ الْمُحَرَّمُ وَشَهْرُ صَفَرٍ وَشَهْرُ رَبِيعِ الْأَوَّلِ وَعَشْرًا مِنْ رَبِيعِ الْآخَرِ.

**“ಪವಿತ್ರ ಮಾಸಗಳು ಎಂಬುದರ ಉದ್ದೇಶವು ಸಮಯಾವಕಾಶ ನೀಡಲಾದ ಮಾಸಗಳು. ಅಂದರೆ ದುಲ್‌ಹಿಜ್ಜಃ ತಿಂಗಳ ಇಪ್ಪತ್ತು ದಿನಗಳು, ಮುಹರ್ರಮ್ ತಿಂಗಳು, ಸಫರ್ ತಿಂಗಳು, ರಬೀಉಲ್ ಅವ್ವಲ್ ತಿಂಗಳು ಮತ್ತು ರಬೀಉಲ್ ಆಖಿರ್ ತಿಂಗಳ ಹತ್ತು ದಿನಗಳು.”** [ತಫ್ಸೀರ್ ಇಬ್ನ್ ಕಸೀರ್ 4/103]

ಅಲ್ಲಾಹು ತಆಲಾ ಹೇಳುತ್ತಾನೆ:

﴿ إِنَّمَا النَّسِيءُ زِيَادَةٌ فِي الْكُفْرِ ﴾

**“ನಸೀಅ್ ಎಂಬುದು ಅವಿಶ್ವಾಸದಲ್ಲಿರುವ ಹೆಚ್ಚುವರಿ ಮಾತ್ರವಾಗಿದೆ.”** [ಕುರ್‌ಆನ್ 9:37]

ಉಲಮಾಗಳ ಪೈಕಿ ಕೆಲವರು ‘ನಸೀಅ್’ ಎಂಬುದರ ಉದ್ದೇಶವು ಸಫರ್ ತಿಂಗಳು ಎಂದಿದ್ದಾರೆ. ಇದರ ಬಗ್ಗೆ ಮುಂದೆ ವಿವರಿಸಲಾಗುವುದು.

ಪ್ರವಾದಿ(ﷺ)ರವರ ದೃಢಪಟ್ಟ, ಸುಸ್ಪಷ್ಟ ಮತ್ತು ಸಹೀಹಾದ ಹದೀಸ್‌ಗಳಲ್ಲಿ ಸಫರ್ ತಿಂಗಳ ಬಗ್ಗೆ ಪ್ರಸ್ತಾಪಗಳಿವೆ. ಅವು ಹೀಗಿವೆ:

1. ಅಬೂ ಹುರೈರಃ(ﷺ)ರವರ ಹದೀಸ್:

عَنْ أَبِي هُرَيْرَةَ ﷺ قَالَ : إِنَّ رَسُولَ اللَّهِ ﷺ قَالَ : « لَا عَدْوَى ، وَلَا طِيَرَةَ ، وَلَا صَفَرَ ، وَلَا هَامَةَ » فَقَالَ أَعْرَابِيٌّ : يَا رَسُولَ اللَّهِ ! فَمَا بَالُ إِبِلِي تَكُونُ فِي الرَّمْلِ كَأَنَّهَا الظِّبَاءُ ، فَيَأْتِي الْبَعِيرُ الْأَجْرَبُ فَيَدْخُلُ بَيْنَهَا يُجْرِبُهَا ؟ فَقَالَ : « فَمَنْ أَعْدَى الْأَوَّلَ »

**"ಅಬೂ ಹುರೈರಃ(ﷺ)ರವರಿಂದ ವರದಿ. ಅವರು ಹೇಳುತ್ತಾರೆ: ಪ್ರವಾದಿ(ﷺ)ರವರು ಹೇಳಿದರು: 'ಅದ್ವಾ ಎಂಬುದಿಲ್ಲ; ತಿಯರಃ ಎಂಬುದಿಲ್ಲ; ಸಫರ್ ಎಂಬುದಿಲ್ಲ; ಹಾಮಃ ಎಂಬುದಿಲ್ಲ.' ಆಗ ಒಬ್ಬ ಗ್ರಾಮೀಣ ವ್ಯಕ್ತಿ ಕೇಳಿದರು: 'ಓ ಅಲ್ಲಾಹನ ರಸೂಲರೇ! ಹಾಗಾದರೆ ನನ್ನ ಒಂಟೆಗಳ ಸ್ಥಿತಿಯೇನು? ಅವು ಜಿಂಕೆಗಳೋ ಎಂಬಂತೆ ಮರಳುಗಾಡಿನಲ್ಲಿರುತ್ತವೆ. ಆಗ ತುರಿಗಜ್ಜಿಯನ್ನು ಹೊಂದಿರುವ ಒಂದು ಒಂಟೆಯು ಅವುಗಳ ನಡುವೆ ಬಂದು ಅವುಗಳಿಗೆಲ್ಲ ತುರಿಗಜ್ಜಿಯನ್ನುಂಟು ಮಾಡುತ್ತದೆಯಲ್ಲವೇ?' ಆಗ ಪ್ರವಾದಿ(ﷺ)ರವರು ಕೇಳಿದರು: 'ಹಾಗಾದರೆ ಮೊಟ್ಟಮೊದಲ ಒಂಟೆಗೆ ತುರಿಗಜ್ಜಿ ದಾಟಿಸಿದವರು ಯಾರು?'** [ಅಲ್‌ಬುಖಾರೀ 5715; ಮುಸ್ಲಿಮ್ 2220]

وَفِي رِوَايَةٍ لِمُسْلِمٍ : قَالَ رَسُولُ اللَّهِ ﷺ : « لَا عَدْوَى ، وَلَا غُولَ ، . . . وَلَا صَفَرَ »

ಮುಸ್ಲಿಮ್ ವರದಿ ಮಾಡಿದ ಇನ್ನೊಂದು ವರದಿಯಲ್ಲಿ ಹೀಗಿದೆ: **"ಪ್ರವಾದಿ(ﷺ)ರವರು ಹೇಳಿದರು: ಅದ್ವಾ ಎಂಬುದಿಲ್ಲ; ಗೂಲ್ ಎಂಬುದಿಲ್ಲ; ... ಸಫರ್ ಎಂಬುದಿಲ್ಲ."** [ಮುಸ್ಲಿಮ್ 2222]

ಎ. **ಅದ್ವಾ :** ಕಾಯಿಲೆ ಮತ್ತು ಅಂಗವೈಕಲ್ಯವು ಅಲ್ಲಾಹನ ಯಾವುದೇ ಹಸ್ತಕ್ಷೇಪವಿಲ್ಲದೆ ಸ್ವಾಭಾವಿಕವಾಗಿ ಒಬ್ಬನಿಂದ ಇನ್ನೊಬ್ಬನಿಗೆ ದಾಟುತ್ತದೆಯೆಂದು ಜಾಹಿಲೀ ಕಾಲದ ಜನರು ವಾದಿಸುತ್ತಿದ್ದರು ಮತ್ತು ನಂಬಿದ್ದರು. ಇದನ್ನು ಅವರು 'ಅದ್ವಾ' ಎಂದು ಕರೆಯುತ್ತಿದ್ದರು. 'ಅದ್ವಾ' ಎಂಬುದಿಲ್ಲ ಎಂದು

ಪ್ರವಾದಿ(ﷺ)ರವರು ಹೇಳಿದಾಗ ಒಬ್ಬ ಗ್ರಾಮೀಣ ವ್ಯಕ್ತಿಯು, ಹಾಗಾದರೆ ತುರಿಗಜ್ಜಿಯನ್ನು ಹೊಂದಿರುವ ಒಂದು ಒಂಟೆಯು ಇತರ ಆರೋಗ್ಯವಂತ ಒಂಟೆಗಳ ನಡುವೆ ಬಂದಾಗ ಆ ತುರಿಗಜ್ಜಿಯು ಆ ಒಂಟೆಗಳಿಗೂ ಉಂಟಾಗುತ್ತವೆಯಲ್ಲವೇ ಎಂದು ಕೇಳುತ್ತಾರೆ. ಅದಕ್ಕೆ ಉತ್ತರವಾಗಿ ಪ್ರವಾದಿ(ﷺ)ರವರು ಹೇಳಿದ ಮಾತಿನ ಅರ್ಥವು ಹೀಗಿದೆ: ಈ ಕಾಯಿಲೆಯು ಅಲ್ಲಾಹನ ಯಾವುದೇ ಹಸ್ತಕ್ಷೇಪವಿಲ್ಲದೆ ಸ್ವಾಭಾವಿಕವಾಗಿ ಒಬ್ಬನಿಂದ ಇನ್ನೊಬ್ಬನಿಗೆ ದಾಟುತ್ತದೆಯೆಂದು ನೀವು ಹೇಳುತ್ತೀರಿ? ಹಾಗಾದರೆ ಮೊಟ್ಟಮೊದಲನೆಯವನಿಗೆ ತುರಿಗಜ್ಜಿ ಉಂಟಾದುದು ಹೇಗೆ? ಅದನ್ನು ಯಾರು ಅವನಿಗೆ ದಾಟಿಸಿದರು? ವಾಸ್ತವವಾಗಿ ಕೆಲವು ಕಾಯಿಲೆಗಳು ಹರಡುತ್ತವೆಯಾದರೂ ಅವು ಹರಡುವುದು ಅಲ್ಲಾಹನ ಯಾವುದೇ ಹಸ್ತಕ್ಷೇಪವಿಲ್ಲದೆ ಸ್ವಾಭಾವಿಕವಾಗಿಯಲ್ಲ; ಬದಲಾಗಿ ಅಲ್ಲಾಹನ ತೀರ್ಮಾನ ಮತ್ತು ನಿರ್ಣಯವನ್ನು ಅನುಸರಿಸಿಯೇ ಅವು ಹರಡುತ್ತವೆಯೆಂದು ಪ್ರವಾದಿ(ﷺ)ರವರು ಈ ಹದೀಸಿನಲ್ಲಿ ಸ್ಪಷ್ಟಪಡಿಸುತ್ತಾರೆ.

ಬಿ. **ತಿಯರಃ :** ‘ತಿಯರಃ’ ಎಂಬ ಪದವು ‘ತತಯ್ಯರ – ಯತತಯ್ಯರು’ [تَطَيَّرَ - يَتَطَيَّرُ] ಎಂಬ ಕ್ರಿಯಾಪದದ ಮಸ್ದರ್ (ಧಾತು) ಆಗಿದೆ. ‘ತತಯ್ಯರ’ ಎಂದರೆ ಒಬ್ಬ ವ್ಯಕ್ತಿ ಒಂದು ದೃಶ್ಯವನ್ನು ಅಥವಾ ಶಬ್ದವನ್ನು ಅಶುಭವೆಂದು ಪರಿಗಣಿಸಿದನು ಎಂದರ್ಥ. ಅನಿಷ್ಟಕರವಾದ ಮಾತು, ಕ್ರಿಯೆ, ದೃಶ್ಯ ಇತ್ಯಾದಿಗಳನ್ನು ಜಾಹಿಲೀ ಕಾಲದ ಅರಬಿಗಳು ‘ತಶಾಉಮ್’ (ಅಶುಭ) ಎಂದು ಕರೆಯುತ್ತಿದ್ದರು. ಅದೇ ರೀತಿ ಇವರು ಶುಭ ಮತ್ತು ಅಶುಭವನ್ನು ನಿರ್ಧರಿಸುವುದಕ್ಕಾಗಿ ಜಿಂಕೆಗಳನ್ನು ಅಥವಾ ಹಕ್ಕಿಗಳನ್ನು ಓಡಿಸುತ್ತಿದ್ದರು. ಅವು ಬಲಭಾಗಕ್ಕೆ ಓಡಿದರೆ ಅವರು ತಮ್ಮ ಕಾರ್ಯದಲ್ಲಿ ಶುಭವನ್ನು ನಿರೀಕ್ಷಿಸುತ್ತಿದ್ದರು. ಇದನ್ನು ಅವರು ‘ಸಾನಿಹ್’ ಎಂದು ಕರೆಯುತ್ತಿದ್ದರು. ಅವು ಎಡಭಾಗಕ್ಕೆ ಓಡಿದರೆ ತಮ್ಮ ಕಾರ್ಯವು ಅಶುಭವಾಗಲಿದೆಯೆಂದು ತೀರ್ಮಾನಿಸಿ ಅವರು ಆ ಕಾರ್ಯವನ್ನು ಅಲ್ಲಿಗೇ ಮೊಟಕುಗೊಳಿಸಿ

ಹಿಂದಿರುಗುತ್ತಿದ್ದರು. ಇದನ್ನು ಅವರು 'ಬಾರಿಹ್' ಎಂದು ಕರೆಯುತ್ತಿದ್ದರು. ಪ್ರಯಾಣ ಮೊದಲಾದ ಸಂದರ್ಭಗಳಲ್ಲಿ ತಮ್ಮ ಪ್ರಯಾಣ ಶುಭಕರವಾಗಲಿದೆಯೋ ಅಥವಾ ಅಶುಭಕರವಾಗಲಿದೆಯೋ ಎಂಬುದನ್ನು ನಿರ್ಧರಿಸಲೂ ಸಹ ಅವರು ಇದನ್ನು ಮಾಡುತ್ತಿದ್ದರು. ಈ ರೀತಿ ಶುಭ ಮತ್ತು ಅಶುಭವನ್ನು ನೋಡುವ ಮೂಲಕ ಅವರ ಎಷ್ಟೋ ಒಳ್ಳೆಯ ಕಾರ್ಯಗಳು ಸ್ಥಗಿತಗೊಳ್ಳುತ್ತಿದ್ದವು. 'ತಿಯರಃ' ಎಂಬುದು ಇಲ್ಲ ಎನ್ನುವ ಮೂಲಕ ಪ್ರವಾದಿ(ﷺ)ರವರು ಶುಭ ಮತ್ತು ಅಶುಭ ನೋಡುವುದನ್ನು ಈ ಹದೀಸಿನಲ್ಲಿ ಸ್ಪಷ್ಟವಾಗಿ ನಿಷೇಧಿಸಿದ್ದಾರೆ.

ಸಿ. **ಸಫರ್ :** ಮುಹರ್ರಮ್ ತಿಂಗಳು ಪವಿತ್ರ ತಿಂಗಳು. ಆದರೆ ಕೆಲವೊಮ್ಮೆ ಜಾಹಿಲೀ ಕಾಲದ ಅರಬಿಗಳು ಮುಹರ್ರಮ್ ತಿಂಗಳನ್ನು ಸಫರ್ ಎಂದು ಮತ್ತು ಸಫರ್ ತಿಂಗಳನ್ನು ಮುಹರ್ರಮ್ ಎಂದು ನಾಮಕರಣ ಮಾಡುತ್ತಿದ್ದರು. ಹೀಗೆ ಅವರು ಮುಹರ್ರಮ್ ತಿಂಗಳ ಬದಲು ಸಫರ್ ತಿಂಗಳಿಗೆ ಪಾವಿತ್ರ್ಯತೆ ನೀಡುತ್ತಿದ್ದರು. ಅವರು ತಮ್ಮ ಸ್ವೇಚ್ಛೆಯ ಪ್ರಕಾರ ಹೀಗೆ ತಿಂಗಳುಗಳನ್ನು ಹಿಂದೆ ಮುಂದೆ ಮಾಡುತ್ತಿದ್ದರು. ಇದನ್ನು ಅವರು 'ನಸೀಅ್' ಎಂದು ಕರೆಯುತ್ತಿದ್ದರು. ಸಫರ್ ಎಂಬುದಿಲ್ಲ ಎಂದು ಹೇಳುವ ಮೂಲಕ ಪ್ರವಾದಿ(ﷺ)ರವರು ಉದ್ದೇಶಿಸಿದ್ದು 'ನಸೀಅ್' ಎಂಬುದಿಲ್ಲ ಎಂಬುದನ್ನಾಗಿದೆಯೆಂದು ಕೆಲವು ಉಲಮಾಗಳು ಅಭಿಪ್ರಾಯಪಡುತ್ತಾರೆ.

ಇತರ ಕೆಲವು ಉಲಮಾಗಳ ಅಭಿಪ್ರಾಯ ಪ್ರಕಾರ ಇಲ್ಲಿ 'ಸಫರ್' ಎಂಬುದರ ಉದ್ದೇಶವು: ಹೊಟ್ಟೆಯಲ್ಲಿ ಹುಳಗಳ ಕಾರಣದಿಂದ ಉಂಟಾಗುವ ಒಂದು ರೋಗ. ಹೊಟ್ಟೆಯಲ್ಲಿ ಹುಳಗಳಿದ್ದು ಅವು ಕೆಲವೊಮ್ಮೆ ಹಾವಿನಷ್ಟು ದೊಡ್ಡದಿದ್ದು ಹಸಿವಿನ ಸಂದರ್ಭ ರೇಗುತ್ತವೆಂದು ಜಾಹಿಲೀ ಕಾಲದ ಅರಬಿಗಳು ನಂಬಿದ್ದರು. ಈ ಕಾಯಿಲೆಯಿಂದಾಗಿ ಕೆಲವೊಮ್ಮೆ ಮನುಷ್ಯನು ಸಾಯುತ್ತಾನೆಂದೂ ಅವರು ನಂಬಿದ್ದರು. ಇದನ್ನು ಅವರು 'ಸಫರ್' ಎಂದು ಕರೆಯುತ್ತಿದ್ದರು. 'ಸಫರ್' ತುರಿಗಜ್ಜಿಗಿಂತಲೂ ವೇಗವಾಗಿ ಇನ್ನೊಬ್ಬರಿಗೆ ದಾಟುತ್ತದೆಯೆಂದು ಅರಬಿಗಳು ಭಾವಿಸಿದ್ದರು. ಪ್ರವಾದಿ(ﷺ)ರವರು 'ಸಫರ್' ಎಂಬುದಿಲ್ಲ ಎಂದು ಹೇಳುವಾಗ

ಅವರು ಉದ್ದೇಶಿಸಿದ್ದು ಇದನ್ನಾಗಿದೆಯೆಂದು ಈ ಉಲಮಾಗಳು ಅಭಿಪ್ರಾಯಪಡುತ್ತಾರೆ. ಇಮಾಮ್ ಅನ್ನವವೀ ಹೇಳುವ ಪ್ರಕಾರ ಈ ಅಭಿಪ್ರಾಯವು ಸರಿಯಾದ ಅಭಿಪ್ರಾಯವಾಗಿದೆ.

ಇತರ ಕೆಲವು ಉಲಮಾಗಳ ಅಭಿಪ್ರಾಯ ಪ್ರಕಾರ ಇಲ್ಲಿ 'ಸಫರ್' ಎಂದು ಹೇಳುವ ಮೂಲಕ ಪ್ರವಾದಿ(ﷺ)ರವರು ಉದ್ದೇಶಿಸಿದ್ದು ಸಫರ್ ತಿಂಗಳನ್ನೇ ಆಗಿದೆ. ಯಾಕೆಂದರೆ ಜಾಹಿಲೀ ಕಾಲದ ಅರಬಿಗಳು ಸಫರ್ ತಿಂಗಳನ್ನು ಅಶುಭವೆಂದು ಪರಿಗಣಿಸಿದ್ದರು. ಇಲ್ಲಿ ಸಫರ್ ಎಂಬುದಿಲ್ಲ ಎಂಬುದರ ಅರ್ಥವು ಸಫರ್ ತಿಂಗಳು ಅಶುಭವಲ್ಲ ಎಂದಾಗಿದೆಯೆಂದು ಇವರು ಅಭಿಪ್ರಾಯಪಡುತ್ತಾರೆ.

ಡಿ. **ಹಾಮಃ** : ಹೆಚ್ಚಾಗಿ ಕಬರಸ್ಥಾನಗಳಲ್ಲಿ ರಾತ್ರಿ ಸಮಯದಲ್ಲಿ ಕಂಡುಬರುವ ಒಂದು ಹಕ್ಕಿಯನ್ನು ಅರಬಿಗಳು 'ಹಾಮಃ' ಎಂದು ಕರೆಯುತ್ತಿದ್ದರು. ಇಲ್ಲಿ ಉದ್ದೇಶಿಸಿದ್ದು ಈ ಹಕ್ಕಿಯನ್ನಾಗಿದೆಯೆಂದು ಕೆಲವು ಉಲಮಾಗಳು ಅಭಿಪ್ರಾಯಪಡುತ್ತಾರೆ. ಇತರ ಕೆಲವು ಉಲಮಾಗಳು ಅಭಿಪ್ರಾಯಪಡುವ ಪ್ರಕಾರ 'ಹಾಮಃ' ಎಂಬುದು ಗೂಬೆಯ ಇನ್ನೊಂದು ಹೆಸರು. ಅರಬಿಗಳು 'ಹಾಮಃ' ಎಂಬ ಹಕ್ಕಿಯನ್ನು ಅಪಶಕುನ ಅಥವಾ ಅಶುಭವೆಂದು ಪರಿಗಣಿಸುತ್ತಿದ್ದರು. ಈ ಹಕ್ಕಿಯು ಯಾವುದಾದರೂ ವ್ಯಕ್ತಿಯ ಮನೆಯ ಮೇಲೆ ಬಿದ್ದರೆ ಆತ ಅಥವಾ ಆ ಮನೆಯಲ್ಲಿರುವ ಯಾರಾದರೊಬ್ಬರು ಸಾಯುತ್ತಾರೆಂಬುದು ಜಾಹಿಲೀ ಕಾಲದ ನಂಬಿಕೆ. ಹಾಮಃ ಎಂಬುದಿಲ್ಲ ಎಂದು ಹೇಳುವ ಮೂಲಕ ಪ್ರವಾದಿ(ﷺ)ರವರು 'ಹಾಮಃ' ಎಂಬ ಹಕ್ಕಿಯು ಅಶುಭವಲ್ಲ ಎನ್ನುತ್ತಿದ್ದಾರೆಂದು ಇವರು ಅಭಿಪ್ರಾಯಪಡುತ್ತಾರೆ.

ಒಬ್ಬ ವ್ಯಕ್ತಿ ಸತ್ತರೆ ಅವನ ಮೂಳೆಗಳು ಅಥವಾ ಆತ್ಮವು 'ಹಾಮಃ' ಎಂಬ ಹಕ್ಕಿಯಾಗಿ ಮಾರ್ಪಟ್ಟು ಹಾರುತ್ತದೆಯೆಂದು ಜಾಹಿಲೀ ಕಾಲದ ಅರಬಿಗಳು ನಂಬಿದ್ದರು. ಇಲ್ಲಿ ಪ್ರವಾದಿ(ﷺ)ರವರು ಉದ್ದೇಶಿಸಿದ್ದು ಇದನ್ನಾಗಿದೆಯೆಂದು

ಇತರ ಕೆಲವು ಉಲಮಾಗಳು ಅಭಿಪ್ರಾಯಪಡುತ್ತಾರೆ. ಇಮಾಮ್ ಅನ್ನವವೀ ಈ ಅಭಿಪ್ರಾಯವನ್ನು ಸರಿಯೆನ್ನುತ್ತಾರೆ.

ಇ. **ಗೂಲ್ :** ಮರುಭೂಮಿಗಳಲ್ಲಿ ವಾಸಿಸುವ ಪಿಶಾಚಿಗಳನ್ನು ಅರಬಿಗಳು 'ಗೂಲ್' (ಬಹುವಚನ: ಗೀಲಾನ್) ಎಂದು ಕರೆಯುತ್ತಿದ್ದರು. ಈ ಪಿಶಾಚಿಗಳು ಜನರ ಮುಂದೆ ವಿವಿಧ ಬಣ್ಣಗಳಲ್ಲಿ ಪ್ರತ್ಯಕ್ಷವಾಗಿ ಜನರಿಗೆ ದಾರಿ ತಪ್ಪುವಂತೆ ಮಾಡಿ ಅವರನ್ನು ನಾಶ ಮಾಡುತ್ತವೆಯೆಂಬುದು ಜಾಹಿಲೀ ಕಾಲದ ನಂಬಿಕೆ. 'ಗೂಲ್' ಎಂಬುದಿಲ್ಲ ಎಂದು ಹೇಳುವ ಮೂಲಕ ಇಂತಹ ಪಿಶಾಚಿಗಳ ಅಸ್ತಿತ್ವವನ್ನು ಪ್ರವಾದಿ(ﷺ)ರವರು ನಿಷೇಧಿಸಿದರೆಂದು ಹೆಚ್ಚಿನ ಉಲಮಾಗಳು ಅಭಿಪ್ರಾಯಪಡುತ್ತಾರೆ. ಆದರೆ ಇತರ ಕೆಲವು ಉಲಮಾಗಳು ಅಭಿಪ್ರಾಯಪಡುವ ಪ್ರಕಾರ ಪ್ರವಾದಿ(ﷺ)ರವರು ಇಲ್ಲಿ 'ಗೂಲ್' ಎಂದು ಕರೆಯಲಾಗುವ ಪಿಶಾಚಿಗಳ ಅಸ್ತಿತ್ವವನ್ನು ನಿಷೇಧಿಸಿಲ್ಲ. ಬದಲಾಗಿ ಅವು ವಿವಿಧ ಬಣ್ಣಗಳಲ್ಲಿ ಪ್ರತ್ಯಕ್ಷವಾಗಿ ಜನರನ್ನು ದಾರಿತಪ್ಪಿಸುತ್ತದೆಯೆಂಬ ಅರಬಿಗಳ ನಂಬಿಕೆಯನ್ನು ನಿಷೇಧಿಸಿದ್ದಾರೆ.

2. ಇಬ್ನ್ ಮಸ್‌ಊದ್(رضي الله عنه)ರವರ ಹದೀಸ್:

عَنِ ابْنِ مَسْعُودٍ رضي الله عنه قَالَ : قَامَ فِينَا رَسُولُ اللَّهِ ﷺ فَقَالَ : « لَا يُعْدَى شَيْءٌ شَيْئًا » ، فَقَالَ أَعْرَابِيٌّ : يَا رَسُولَ اللَّهِ ، الْبَعِيرُ أَجْرَبُ الْحَشَفَةِ نُدْبِنُهُ فَيُجْرِبُ الْإِبِلَ كُلَّهَا ؟ فَقَالَ رَسُولُ اللَّهِ ﷺ : « فَمَنْ أَجْرَبَ الْأَوَّلَ؟ لَا عَدْوَى وَلَا صَفَرَ ، خَلَقَ اللَّهُ كُلَّ نَفْسٍ ، فَكَتَبَ حَيَاتَهَا وَرِزْقَهَا وَمَصَائِبَهَا »

**"ಇಬ್ನ್ ಮಸ್‌ಊದ್(رضي الله عنه)ರಿಂದ ವರದಿ. ಅವರು ಹೇಳುತ್ತಾರೆ: ಒಮ್ಮೆ ಪ್ರವಾದಿ(ﷺ)ರವರು ನಮ್ಮ ಮುಂದೆ ನಿಂತು ಹೇಳಿದರು: 'ಯಾವುದೇ ವಸ್ತು ಇನ್ನೊಂದು ವಸ್ತುವಿಗೆ ದಾಟುವುದಿಲ್ಲ." ಆಗ ಒಬ್ಬ ಗ್ರಾಮೀಣ ಅರಬಿ ಕೇಳಿದರು: 'ಓ ಅಲ್ಲಾಹನ ರಸೂಲರೇ! ಶಿಶ್ನದ ತುದಿಯಲ್ಲಿ ತುರಿಗಜ್ಜಿಯಿರುವ ಒಂಟೆಯನ್ನು**

**ನಾವು ಇತರ ಒಂಟೆಗಳಿರುವ ಹಟ್ಟಿಗೆ ಸೇರಿಸುತ್ತೇವೆ. ಆಗ ಎಲ್ಲ ಒಂಟೆಗಳಿಗೂ ತುರಿಗಜ್ಜಿಯುಂಟಾಗುತ್ತದೆ.' ಆಗ ಪ್ರವಾದಿ(ﷺ)ರವರು ಕೇಳಿದರು: 'ಹಾಗಾದರೆ ಮೊಟ್ಟಮೊದಲನೆಯದಕ್ಕೆ ತುರಿಗಜ್ಜಿ ಉಂಟಾಗುವಂತೆ ಮಾಡಿದ್ದು ಯಾರು? ಅದ್ವಾ ಎಂಬುದಿಲ್ಲ; ಸಫರ್ ಎಂಬುದಿಲ್ಲ; ಎಲ್ಲ ಜೀವಿಗಳನ್ನು ಸೃಷ್ಟಿಸಿದವನು ಅಲ್ಲಾಹು. ಅವುಗಳ ಆಯುಷ್ಯ, ಅನ್ನಾಧಾರ ಮತ್ತು ವಿಪತ್ತುಗಳನ್ನು ಅವನು ದಾಖಲಿಸಿಟ್ಟಿದ್ದಾನೆ."** [ಅಹ್ಮದ್ 1/440; ಅತ್ತಿರ್ಮಿದೀ 2230; ಅತ್ತಹಾವೀ 'ಶರ್ಹ್ ಮಆನಿಲ್ ಆಸಾರ್'ನಲ್ಲಿ 4/308; ಅಲ್ಅಲ್ಬಾನೀ ಇದನ್ನು ಸಹೀಹ್ ಎಂದಿದ್ದಾರೆ. ನೋಡಿ: ಸಿಲ್ಸಿಲತು ಸ್ಸಹೀಹಃ 1152]

ಈ ಹದೀಸಿನಲ್ಲಿ 'ಸಫರ್' ಎಂಬುದಿಲ್ಲ ಎನ್ನುವ ಮೂಲಕ ಪ್ರವಾದಿ(ﷺ)ರವರು ಉದ್ದೇಶಿಸಿದ್ದು ಈಗಾಗಲೇ ವಿವರಿಸಲಾದ 'ಸಫರ್' ಎಂಬ ಹುಳಗಳ ರೋಗವನ್ನಾಗಿರಬಹುದು. ಅಥವಾ ಸಫರ್ ತಿಂಗಳನ್ನಾಗಿರಬಹುದು. ಏಕೆಂದರೆ ಸಫರ್ ತಿಂಗಳನ್ನು ಜಾಹಿಲೀ ಕಾಲದ ಅರಬಿಗಳು ಅಶುಭವೆಂದು ಪರಿಗಣಿಸುತ್ತಿದ್ದರು. ಸಫರ್ ಎಂಬುದಿಲ್ಲ ಎನ್ನುವ ಮೂಲಕ ಪ್ರವಾದಿ(ﷺ)ರವರು ಈ ಅಶುಭವನ್ನು ನಿಷೇಧಿಸಿದ್ದಾರೆ.

ಇಬ್ನ್ ರಜಬ್ ಅಲ್ಹಂಬಲೀ ಹೇಳುತ್ತಾರೆ:

وَلَعَلَّ هَذَا الْقَوْلَ أَشْبَهُ الْأَقْوَالِ، وَكَثِيرٌ مِنَ الْجُهَّالِ يَتَشَاءَمُ بِصَفَرٍ، وَرُبَّمَا يُنْهَى عَنِ السَّفَرِ فِيهِ، وَالتَّشَاؤُمُ بِصَفَرٍ هُوَ مِنْ جِنْسِ الطِّيَرَةِ الْمَنْهِيِّ عَنْهَا.

**"ಬಹುಶಃ ಈ ಅಭಿಪ್ರಾಯವು ಹೆಚ್ಚು ಸರಿಹೊಂದುವ ಅಭಿಪ್ರಾಯವಾಗಿದೆ. ಅಜ್ಞಾನಿಗಳಲ್ಲಿ ಹೆಚ್ಚಿನವರೂ ಸಫರ್ ತಿಂಗಳನ್ನು ಅಶುಭವೆಂದು ಪರಿಗಣಿಸುತ್ತಾರೆ. ಕೆಲವೊಮ್ಮೆ ಅವರು ಅದರಲ್ಲಿ ಪ್ರಯಾಣ ಮಾಡುವುದನ್ನು ವಿರೋಧಿಸುತ್ತಾರೆ. ಸಫರ್ ತಿಂಗಳನ್ನು ಅಶುಭವೆಂದು ಪರಿಗಣಿಸುವುದು ಶುಭ ಮತ್ತು ಅಶುಭವನ್ನು ನೋಡುವ ನಿಷಿದ್ಧ ವಿಧಗಳಲ್ಲಿ ಒಂದಾಗಿದೆ."** [ಲತಾಇಫುಲ್ ಮಆರಿಫ್ ಪುಟ 81]

ಅವರು ಮುಂದುವರಿದು ಹೇಳುತ್ತಾರೆ:

وَأَمَّا تَخْصِيصُ الشُّؤْمِ بِزَمَانٍ دُونَ زَمَانٍ كَشَهْرِ صَفَرٍ أَوْ غَيْرِهِ فَغَيْرُ صَحِيحٍ ، وَإِنَّمَا الزَّمَانُ كُلُّهُ خَلْقُ اللَّهِ تَعَالَى ، وَفِيهِ تَقَعُ أَفْعَالُ بَنِي آدَمَ ، فَكُلُّ زَمَانٍ شَغَلَهُ الْمُؤْمِنُ بِطَاعَةِ اللَّهِ فَهُوَ زَمَانٌ مُبَارَكٌ عَلَيْهِ ، وَكُلُّ زَمَانٍ شَغَلَهُ الْعَبْدُ بِمَعْصِيَةِ اللَّهِ فَهُوَ مَشْؤُومٌ عَلَيْهِ ، فَالشُّؤْمُ فِي الْحَقِيقَةِ هُوَ مَعْصِيَةُ اللَّهِ تَعَالَى ، كَمَا قَالَ ابْنُ مَسْعُودٍ ﷺ: « إِذَا كَانَ الشُّؤْمُ فِي شَيْءٍ فَفِيمَا بَيْنَ اللَّحْيَيْنِ يَعْنِي اللِّسَانَ »

**“ಸಫರ್ ತಿಂಗಳು ಇತ್ಯಾದಿಗಳನ್ನು ಅಶುಭವೆಂದು ಪರಿಗಣಿಸುವಂತೆ ಇತರ ಕಾಲಗಳನ್ನು ಹೊರತುಪಡಿಸಿ ಕೆಲವು ಕಾಲಗಳಿಗೆ ಮಾತ್ರ ಅಶುಭವನ್ನು ಸೀಮಿತಗೊಳಿಸುವುದು ಸರಿಯಲ್ಲ. ಕಾಲಗಳೆಲ್ಲವೂ ಅಲ್ಲಾಹನ ಸೃಷ್ಟಿಗಳು. ಕಾಲಗಳಲ್ಲಿ ಆದಮ್ ಸಂತತಿಗಳ ಕರ್ಮಗಳು ಉಂಟಾಗುತ್ತವೆ. ಆದ್ದರಿಂದ ವಿಶ್ವಾಸಿಯು ಅಲ್ಲಾಹನ ಆಜ್ಞಾಪಾಲನೆ ಮಾಡುತ್ತಾ ಕಳೆಯುವ ಕಾಲಗಳೆಲ್ಲವೂ ಅವನ ಪಾಲಿಗೆ ಶುಭ ಕಾಲಗಳು. ಹಾಗೆಯೇ ದಾಸನು ಅಲ್ಲಾಹನ ಆಜ್ಞೋಲ್ಲಂಘನೆ ಮಾಡುತ್ತಾ ಕಳೆಯುವ ಕಾಲಗಳೆಲ್ಲವೂ ಅವನ ಪಾಲಿಗೆ ಅಶುಭ ಕಾಲಗಳು. ಆದ್ದರಿಂದ ವಾಸ್ತವವಾಗಿ ಅಶುಭ ಎಂಬುದು ಅಲ್ಲಾಹನ ಆಜ್ಞೋಲ್ಲಂಘನೆಯಾಗಿದೆ. ಇಬ್ನ್ ಮಸ್‌ಊದ್(ﷺ)ರವರು ಹೇಳಿದಂತೆ: ಅಶುಭವು ಯಾವುದಾದರೂ ವಸ್ತುವಿನಲ್ಲಿ ಇರುವುದಾದರೆ ಅದು ಇರುವುದು ಎರಡು ದವಡೆಗಳ ನಡುವಿನಲ್ಲಾಗಿದೆ. ಅಂದರೆ ನಾಲಗೆಯಲ್ಲಾಗಿದೆ.”** [ಲತಾಇಫುಲ್ ಮಆರಿಫ್ ಪುಟ 75–76]

3. ಇಬ್ನ್ ಅಬ್ಬಾಸ್(ﷺ)ರವರ ಹದೀಸ್:

عَنِ ابْنِ عَبَّاسٍ ﷺ قَالَ : كَانُوا يَرَوْنَ أَنَّ الْعُمْرَةَ فِي أَشْهُرِ الْحَجِّ مِنْ أَفْجَرِ الْفُجُورِ فِي الْأَرْضِ ، وَيَجْعَلُونَ الْمُحَرَّمَ صَفَرًا ، وَيَقُولُونَ : إِذَا بَرَأَ الدَّبَرْ ، وَعَفَا الْأَثَرْ ، وَانْسَلَخَ

صَفَرْ ، حَلَّتِ الْعُمْرَةُ لِمَنِ اعْتَمَرْ . قَدِمَ النَّبِيُّ ﷺ وَأَصْحَابُهُ صَبِيحَةَ رَابِعَةٍ مُهِلِّينَ بِالْحَجِّ ، فَأَمَرَهُمْ أَنْ يَجْعَلُوهَا عُمْرَةً ، فَتَعَاظَمَ ذَلِكَ عِنْدَهُمْ فَقَالُوا : يَا رَسُولَ اللَّهِ ، أَيُّ الْحِلِّ ؟ قَالَ : « الْحِلُّ كُلُّهُ »

ಇಬ್ನ್ ಅಬ್ಬಾಸ್(ﷺ)ರಿಂದ ವರದಿ. ಅವರು ಹೇಳುತ್ತಾರೆ: ಹಜ್ಜ್ ತಿಂಗಳಲ್ಲಿ ಉಮ್ರ: ನಿರ್ವಹಿಸುವುದು ಭೂಮಿಯಲ್ಲಿ ಮಾಡುವ ಅಧರ್ಮಗಳಲ್ಲೇ ಅತಿದೊಡ್ಡ ಅಧರ್ಮವೆಂದು ಜಾಹಿಲೀ ಕಾಲದ ಅರಬಿಗಳು ಭಾವಿಸಿದ್ದರು. ಅವರು ಮುಹರ್ರಮ್ ತಿಂಗಳನ್ನು ಸಫರ್ ತಿಂಗಳನ್ನಾಗಿ ಮಾಡುತ್ತಿದ್ದರು. ಅವರು ಹೇಳುತ್ತಿದ್ದರು: 'ದಬರ್' ಗುಣವಾದರೆ, 'ಅಸರ್' ಮಾಯವಾದರೆ, ಸಫರ್ ತಿಂಗಳು ಸರಿದು ಹೋದರೆ, ಉಮ್ರ: ನಿರ್ವಹಿಸುವವನಿಗೆ ಉಮ್ರ: ನಿರ್ವಹಿಸುವುದು ಧರ್ಮಸಮ್ಮತವಾಗುತ್ತದೆ. ಹೀಗಿರುವಾಗ ಪ್ರವಾದಿ(ﷺ)ರವರು ಮತ್ತು ಅವರ ಸಹಾಬಾಗಳು ಹಜ್ಜ್ ನಿರ್ವಹಿಸುವುದಕ್ಕಾಗಿ ಇಹ್ರಾಮ್ ಮಾಡಿ ದುಲ್‌ಹಿಜ್ಜ: ನಾಲ್ಕನೆ ದಿನದಂದು ಮಕ್ಕ:ಕ್ಕೆ ಬಂದರು. ಆಗ ಪ್ರವಾದಿ(ﷺ)ರವರು ಅವರೊಂದಿಗೆ (ಅಂದರೆ ಬಲಿಮೃಗವನ್ನು ತರದವರೊಂದಿಗೆ) ಹಜ್ಜ್‌ನ ಇಹ್ರಾಮ್‌ನಿಂದ ವಿಮುಕ್ತರಾಗಿ ಅದನ್ನು ಉಮ್ರ: ಆಗಿ ಮಾಡಬೇಕೆಂದು ಆಜ್ಞಾಪಿಸಿದರು. ಇದು ಅವರಿಗೆ ದೊಡ್ಡ ವಿಷಯವಾಗಿ ಕಂಡಿತು. ಅವರು ಕೇಳಿದರು: 'ಓ ಅಲ್ಲಾಹನ ರಸೂಲರೇ! ಸಂಪೂರ್ಣವಾಗಿ ವಿಮುಕ್ತರಾಗಬೇಕೇ?.' ಪ್ರವಾದಿ(ﷺ)ರವರು ಹೇಳಿದರು: 'ಸಂಪೂರ್ಣವಾಗಿ ವಿಮುಕ್ತರಾಗಬೇಕು." [ಅಲ್‌ಬುಖಾರೀ 1564; ಮುಸ್ಲಿಮ್ 1240]

ಎ. **ದಬರ್** : ದಬರ್ ಎಂದರೆ ಸಾಮಾನುಗಳನ್ನು ಹೊರುವ ಮೂಲಕ ಒಂಟೆಯ ಬೆನ್ನುಗಳಲ್ಲಿ ಕಾಣಿಸಿಕೊಳ್ಳುವ ಗಾಯಗಳು. ಹಜ್ ಮುಗಿಯುವವರೆಗೂ ಈ ಗಾಯಗಳು ಗುಣವಾಗುತ್ತಿರಲಿಲ್ಲ.

ಬಿ. **ಅಸರ್** : ಅಸರ್ ಎಂದರೆ ಗುರುತು, ಕುರುಹು, ಹೆಜ್ಜೆ ಗುರುತು ಇತ್ಯಾದಿ ಕಲೆಗಳು. ಇಲ್ಲಿ ಉದ್ದೇಶಿಸಿರುವುದು ಒಂಟೆಗಳು ಮತ್ತು ಜನರು ಹಜ್ಜ್ ಮುಗಿಸಿ

ಮರಳಿನಲ್ಲಿ ನಡೆದು ಹೋದ ಹೆಜ್ಜೆಗುರುತುಗಳು ಅಳಿದುಹೋಗುವುದನ್ನಾಗಿರಬಹುದು ಅಥವಾ ಒಂಟೆಯ ಬೆನ್ನುಗಳಲ್ಲಿ ಕಾಣಿಸಿಕೊಳ್ಳುವ ಗಾಯದ ಕುರುಹುಗಳು ಮಾಯವಾಗುವುದನ್ನಾಗಿರಬಹುದು.

## ಜಾಹಿಲೀ ಕಾಲದಲ್ಲಿ ಸಫರ್ ತಿಂಗಳು

ಜಾಹಿಲೀ ಕಾಲದ ಅರಬಿಗಳು ಸಫರ್ ತಿಂಗಳಲ್ಲಿ ಎರಡು ಮಹಾ ಅಪರಾಧಗಳನ್ನು ಮಾಡುತ್ತಿದ್ದರು.

1. ನಸೀಅ್: ಅಲ್ಲಾಹು ತಆಲಾ ಹೇಳುತ್ತಾನೆ:

﴿ إِنَّمَا النَّسِيءُ زِيَادَةٌ فِي الْكُفْرِ يُضَلُّ بِهِ الَّذِينَ كَفَرُوا يُحِلُّونَهُ عَامًا وَيُحَرِّمُونَهُ عَامًا ﴾

**"ನಸೀಅ್ ಎಂಬುದು ಅವಿಶ್ವಾಸದಲ್ಲಿರುವ ಹೆಚ್ಚುವರಿ ಮಾತ್ರವಾಗಿದೆ. ಅವಿಶ್ವಾಸಿಗಳನ್ನು ಇದರ ಮೂಲಕ ದಾರಿತಪ್ಪಿಸಲಾಗುತ್ತಿದೆ. ಅವರು ಒಂದು ವರ್ಷ ಇದನ್ನು ನಿಷಿದ್ಧವೆನ್ನುತ್ತಾರೆ ಮತ್ತು ಇನ್ನೊಂದು ವರ್ಷ ಇದನ್ನು ಧರ್ಮಸಮ್ಮತವೆನ್ನುತ್ತಾರೆ."** [ಕುರ್‌ಆನ್ 9:37]

ಎಲ್ಲರಿಗೂ ಸುಪರಿಚಿತವಾಗಿರುವಂತೆ ಅಲ್ಲಾಹು ವರ್ಷದಲ್ಲಿ ಹನ್ನೆರಡು ತಿಂಗಳುಗಳನ್ನು ಸೃಷ್ಟಿಸಿದ್ದಾನೆ. ಅವುಗಳ ಪೈಕಿ ನಾಲ್ಕು ತಿಂಗಳುಗಳನ್ನು ಅವನು ಪವಿತ್ರ (ಯುದ್ಧ ನಿಷಿದ್ಧ)ಗೊಳಿಸಿದ್ದಾನೆ. ಈ ನಾಲ್ಕು ತಿಂಗಳುಗಳು ದುಲ್‌ಕಅ್‌ದಃ, ದುಲ್‌ಹಿಜ್ಜ, ಮುಹರ್ರಮ್ ಮತ್ತು ರಜಬ್.

ಪ್ರವಾದಿ(ﷺ)ರವರು ಹೇಳಿದರು:

« إِنَّ الزَّمَانَ قَدِ اسْتَدَارَ كَهَيْئَتِهِ يَوْمَ خَلَقَ اللَّهُ السَّمَاوَاتِ وَالْأَرْضَ ، السَّنَةُ اثْنَا عَشَرَ شَهْرًا مِنْهَا أَرْبَعَةٌ حُرُمٌ ، ثَلَاثَةٌ مُتَوَالِيَاتٌ : ذُو الْقَعْدَةِ وَذُو الْحِجَّةِ وَالْمُحَرَّمُ ، وَرَجَبُ مُضَرَ الَّذِي بَيْنَ جُمَادَى وَشَعْبَانَ. . . »

**"ಖಂಡಿತವಾಗಿಯೂ ಕಾಲವು ಅಲ್ಲಾಹು ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದಂದಿನಿಂದ ಅದರ ಆಕೃತಿಯಲ್ಲೇ ತಿರುಗುತ್ತಿದೆ. ವರ್ಷವು ಹನ್ನೆರಡು ತಿಂಗಳುಗಳಾಗಿವೆ. ಅವುಗಳಲ್ಲಿ ನಾಲ್ಕು ಪವಿತ್ರವಾಗಿವೆ. ಮೂರು ಒಂದರ ನಂತರ ಒಂದಾಗಿ ಬರುವ ತಿಂಗಳುಗಳು. ಅವು: ದುಲ್‌ಕಅ್‌ದಃ, ದುಲ್‌ಹಿಜ್ಜ, ಮುಹರ್ರಮ್ ಮತ್ತು ಜುಮಾದಾ ಹಾಗೂ ಶಅ್‌ಬಾನ್ ತಿಂಗಳುಗಳ ಮಧ್ಯೆ ಬರುವ ಮುದರ್ ಗೋತ್ರದವರ ರಜಬ್ ತಿಂಗಳು."** [ಅಲ್‌ಬುಖಾರೀ 5230; ಮುಸ್ಲಿಮ್ 1679]

ಮುಶ್ರಿಕ್‌ಗಳು ಇದನ್ನು ಚೆನ್ನಾಗಿ ಅರಿತಿದ್ದರು. ಆದರೆ ಅವರು ತಮ್ಮ ಸ್ವೇಚ್ಛೆಗನುಗುಣವಾಗಿ ಕೆಲವು ತಿಂಗಳುಗಳನ್ನು ಹಿಂದೆ ಮುಂದೆ ಮಾಡುತ್ತಿದ್ದರು. ಅವರು ಕೆಲವೊಮ್ಮೆ ಸಫರ್ ತಿಂಗಳನ್ನು ಮುಹರ್ರಮ್ ತಿಂಗಳಿಗೆ ಬದಲಿಯಾಗಿ ಮಾಡುತ್ತಿದ್ದರು. ಇದು ಮಾತ್ರವಲ್ಲದೆ, ಹಜ್ಜ್ ತಿಂಗಳುಗಳಲ್ಲಿ ಉಮ್ರಃ ಮಾಡುವುದನ್ನು ಅವರು ಅತಿದೊಡ್ಡ ಅಧರ್ಮವಾಗಿ ಪರಿಗಣಿಸುತ್ತಿದ್ದರು.

ಇಬ್ನ್ ಅಬ್ಬಾಸ್(ﷺ)ರವರು ಹೇಳುತ್ತಾರೆ:

كَانُوا يَرَوْنَ أَنَّ الْعُمْـرَةَ فِي أَشْـهُرِ الْحَـجِّ مِـنْ أَفْجَـرِ الْفُجُـورِ فِي الْأَرْضِ ، وَيَجْعَلُـونَ الْمُحَرَّمَ صَفَرًا ، وَيَقُولُونَ : إِذَا بَرَأَ الدَّبَرْ ، وَعَفَا الْأَثَرْ ، وَانْسَلَخَ صَفَرْ ، حَلَّـتِ الْعُمْـرَةُ لِمَنِ اعْتَمَرْ.

**"ಹಜ್ಜ್ ತಿಂಗಳಲ್ಲಿ ಉಮ್ರಃ ನಿರ್ವಹಿಸುವುದು ಭೂಮಿಯಲ್ಲಿ ಮಾಡುವ ಅಧರ್ಮಗಳಲ್ಲೇ ಅತಿದೊಡ್ಡ ಅಧರ್ಮವೆಂದು ಜಾಹಿಲೀ ಕಾಲದ ಅರಬಿಗಳು ಭಾವಿಸಿದ್ದರು. ಅವರು ಮುಹರ್ರಮ್ ತಿಂಗಳನ್ನು ಸಫರ್ ತಿಂಗಳನ್ನಾಗಿ ಮಾಡುತ್ತಿದ್ದರು. ಅವರು ಹೇಳುತ್ತಿದ್ದರು: 'ದಬರ್' ಗುಣವಾದರೆ, 'ಅಸರ್'**

**ಮಾಯವಾದರೆ, ಸಫರ್ ತಿಂಗಳು ಸರಿದು ಹೋದರೆ, ಉಮ್ರಃ ನಿರ್ವಹಿಸುವವನಿಗೆ ಉಮ್ರಃ ನಿರ್ವಹಿಸುವುದು ಧರ್ಮಸಮ್ಮತವಾಗುತ್ತದೆ."** [ಅಲ್‌ಬುಖಾರೀ 1564; ಮುಸ್ಲಿಮ್ 1240]

'ನಸೀಅ್'ನ ವಿಷಯದಲ್ಲಿ (ಪವಿತ್ರ ತಿಂಗಳನ್ನು ಹಿಂದೆ ಮುಂದೆ ಮಾಡುವ ವಿಷಯದಲ್ಲಿ) ಇಬ್ನುಲ್ ಅರಬೀ ಮೂರು ವರದಿಗಳನ್ನು ಉದ್ಧರಿಸುತ್ತಾರೆ:

ಒಂದು: ಇಬ್ನ್ ಅಬ್ಬಾಸ್(﵄)ರವರ ವರದಿ:

أَنَّ جُنَادَةَ بْنَ عَوْفِ بْنِ أُمَيَّةَ الْكِنَانِيَّ كَانَ يُوَافِي الْمَوْسِمَ كُلَّ عَامٍ ، فَيُنَادِي : ... أَلَا وَإِنَّ صَفَرًا الْعَامَ الْأَوَّلَ حَلَالٌ ، فَنُحَرِّمُهُ عَامًا ، وَنُحِلُّهُ عَامًا.

**"ಜುನಾದಃ ಇಬ್ನ್ ಔಫ್ ಇಬ್ನ್ ಉಮಯ್ಯಃ ಅಲ್‌ಕಿನಾನೀ ಎಂಬವನು ಹಜ್ಜ್ ನಿರ್ವಹಿಸಲು ಪ್ರತಿವರ್ಷ ಬರುತ್ತಿದ್ದನು. ಅವನು ಘೋಷಿಸುತ್ತಿದ್ದನು: ...ಅರಿತುಕೊಳ್ಳಿರಿ! ಈ ವರ್ಷದ ಮೊದಲ ಸಫರ್ ಧರ್ಮಸಮ್ಮತವಾಗಿದೆ. ಆದ್ದರಿಂದ ಒಂದು ವರ್ಷ ನಾವು ಅದನ್ನು ನಿಷಿದ್ಧ (ಪವಿತ್ರ)ಗೊಳಿಸುತ್ತೇವೆ. ಮತ್ತು ಇನ್ನೊಂದು ವರ್ಷ ನಾವು ಅದನ್ನು ಧರ್ಮಸಮ್ಮತಗೊಳಿಸುತ್ತೇವೆ."**

ಇನ್ನೊಂದು ವರದಿಯಲ್ಲಿ ಹೀಗಿದೆ:

كَانَ يَقُولُ : إِنَّا قَدَّمْنَا الْمُحَرَّمَ وَأَخَّرْنَا صَفَرًا ، ثُمَّ يَأْتِي الْعَامَ الثَّانِي فَيَقُولُ : إِنَّا حَرَّمْنَا صَفَرًا وَأَخَّرْنَا الْمُحَرَّمَ.

**"ಅವನು ಹೇಳುತ್ತಿದ್ದನು: ನಾವು ಮುಹರ್ರಮ್ ತಿಂಗಳನ್ನು ಮುಂದಕ್ಕೆ ಮಾಡಿ ಸಫರ್ ತಿಂಗಳನ್ನು ಹಿಂದಕ್ಕೆ ಮಾಡಿದ್ದೇವೆ. ನಂತರ ಮುಂದಿನ ವರ್ಷ ಬಂದಾಗ ಅವನು ಹೇಳುತ್ತಿದ್ದನು: ನಾವು ಸಫರ್ ತಿಂಗಳನ್ನು ನಿಷಿದ್ಧ (ಪವಿತ್ರ)ಗೊಳಿಸಿದ್ದೇವೆ ಮತ್ತು ಮುಹರ್ರಮ್ ತಿಂಗಳನ್ನು ಹಿಂದಕ್ಕೆ ಮಾಡಿದ್ದೇವೆ."** [ಅಹ್ಕಾಮುಲ್ ಕುರ್‌ಆನ್ 2/503]

ಎರಡು: ಕತಾದಃ(﵄)ರವರ ವರದಿ:

عَمَدَ قَوْمٌ مِنْ أَهْلِ الضَّلَالَةِ فَزَادُوا صَفَرًا فِي الْأَشْهُرِ الْحُرُمِ ، فَكَانَ يَقُومُ قَائِمُهُمْ فِي الْمَوْسِمِ فَيَقُولُ : أَلَا إِنَّ آلِهَتَكُمْ قَدْ حَرَّمَتِ الْعَامَ الْمُحَرَّمَ ، فَيُحَرِّمُونَهُ ذَلِكَ الْعَامَ ، ثُمَّ يَقُومُ فِي الْعَامِ الْمُقْبِلِ فَيَقُولُ : أَلَا إِنَّ آلِهَتَكُمْ قَدْ حَرَّمَتْ صَفَرًا فَيُحَرِّمُونَهُ ذَلِكَ الْعَامَ ، وَيَقُولُونَ : الصَّفَرَانِ.

"ಪಥಭ್ರಷ್ಟ ಜನರು ನಿಷಿದ್ಧ (ಪವಿತ್ರ) ತಿಂಗಳುಗಳಲ್ಲಿ ಸಫರ್ ತಿಂಗಳನ್ನು ಹೆಚ್ಚುವರಿಯಾಗಿ ಸೇರಿಸುತ್ತಿದ್ದರು. ಹಜ್ಜ್‌ನ ಸಂದರ್ಭ ಅವರ ನಾಯಕ ಎದ್ದು ನಿಂತು ಹೇಳುತ್ತಿದ್ದನು: ಅರಿತುಕೊಳ್ಳಿರಿ! ನಿಮ್ಮ ದೇವರುಗಳು ಈ ವರ್ಷ ಮುಹರ್ರಮ್ ತಿಂಗಳನ್ನು ನಿಷಿದ್ಧ (ಪವಿತ್ರ) ವೆಂದು ಸಾರಿದ್ದಾರೆ. ಹೀಗೆ ಅವರು ಆ ವರ್ಷದಲ್ಲಿ ಮುಹರ್ರಮ್ ತಿಂಗಳನ್ನು ನಿಷಿದ್ಧ (ಪವಿತ್ರ) ವನ್ನಾಗಿ ಮಾಡುತ್ತಿದ್ದರು. ನಂತರ ಮುಂದಿನ ವರ್ಷ ಅವನು ಎದ್ದು ನಿಂತು ಹೇಳುತ್ತಿದ್ದನು: ಅರಿತುಕೊಳ್ಳಿರಿ! ನಿಮ್ಮ ದೇವರುಗಳು ಈ ವರ್ಷ ಸಫರ್ ತಿಂಗಳನ್ನು ನಿಷಿದ್ಧ (ಪವಿತ್ರ) ವೆಂದು ಸಾರಿದ್ದಾರೆ. ಹೀಗೆ ಅವರು ಆ ವರ್ಷ ಸಫರ್ ತಿಂಗಳನ್ನು ನಿಷಿದ್ಧ (ಪವಿತ್ರ) ವನ್ನಾಗಿ ಮಾಡುತ್ತಿದ್ದರು. ಎರಡು ಸಫರ್ ಇದೆಯೆಂದು ಅವರು ಹೇಳುತ್ತಿದ್ದರು." [ಅಹ್ಕಾಮುಲ್ ಕುರ್‌ಆನ್ 2/503]

ಮೂರು: ಮುಜಾಹಿದ್(ﷺ)ರವರ ವರದಿ:

حَجُّوا فِي ذِي الْحِجَّةِ عَامَيْنِ ، ثُمَّ حَجُّوا فِي الْمُحَرَّمِ عَامَيْنِ ، ثُمَّ حَجُّوا فِي صَفَرٍ عَامَيْنِ ، فَكَانُوا يَحُجُّونَ فِي كُلِّ سَنَةٍ فِي كُلِّ شَهْرٍ عَامَيْنِ حَتَّى وَافَتْ حَجَّةُ أَبِي بَكْرٍ فِي ذِي الْقَعْدَةِ ، ثُمَّ حَجَّ النَّبِيُّ ﷺ فِي ذِي الْحِجَّةِ ، فَذَلِكَ قَوْلُ النَّبِيِّ ﷺ فِي الْحَدِيثِ الصَّحِيحِ فِي خُطْبَتِهِ : « إِنَّ الزَّمَانَ قَدِ اسْتَدَارَ كَهَيْئَتِهِ يَوْمَ خَلَقَ اللَّهُ السَّمَاوَاتِ وَالْأَرْضَ ».

"ಅವರು ಎರಡು ವರ್ಷ ದುಲ್‌ಹಿಜ್ಜಃ ತಿಂಗಳಲ್ಲಿ ಹಜ್ಜ್ ನಿರ್ವಹಿಸುತ್ತಿದ್ದರು. ಎರಡು ವರ್ಷ ಮುಹರ್ರಮ್ ತಿಂಗಳಲ್ಲಿ ಹಜ್ಜ್ ನಿರ್ವಹಿಸುತ್ತಿದ್ದರು. ಎರಡು ವರ್ಷ

**ಸಫರ್ ತಿಂಗಳಲ್ಲಿ ಹಜ್ಜ್ ನಿರ್ವಹಿಸುತ್ತಿದ್ದರು. ಎರಡು ವರ್ಷ ಪ್ರತಿವರ್ಷ ಪ್ರತಿ ತಿಂಗಳಲ್ಲಿ ಹಜ್ಜ್ ನಿರ್ವಹಿಸುತ್ತಿದ್ದರು. ಅಬೂ ಬಕ್ರ್(ﷺ)ರವರು ದುಲ್‌ಕಅ್‌ದಃ ತಿಂಗಳಲ್ಲಿ ಹಜ್ಜ್ ನಿರ್ವಹಿಸುವ ತನಕ ಇದು ಮುಂದುವರಿದಿತ್ತು. ನಂತರ ಪ್ರವಾದಿ(ﷺ)ರವರು ದುಲ್‌ಹಿಜ್ಜಃ ತಿಂಗಳಲ್ಲಿ ಹಜ್ಜ್ ನಿರ್ವಹಿಸಿದರು. ಈ ಕಾರಣದಿಂದಲೇ ಸಹೀಹಾದ ಹದೀಸಿನಲ್ಲಿರುವಂತೆ ಪ್ರವಾದಿ(ﷺ)ರವರು ಹಜ್ಜತುಲ್ ವಿದಾಅ್‌ನ ಖುತುಬಃ ನಿರ್ವಹಿಸುತ್ತಾ ಹೇಳಿದರು: ಖಂಡಿತವಾಗಿಯೂ ಅಲ್ಲಾಹು ಆಕಾಶಗಳನ್ನು ಮತ್ತು ಭೂಮಿಯನ್ನು ಸೃಷ್ಟಿಸಿದಂದಿನಿಂದ ಕಾಲವು ಅದರ ಆಕೃತಿಯಲ್ಲೇ ತಿರುಗುತ್ತಿದೆ."** [ಅಹ್ಕಾಮುಲ್ ಕುರ್‌ಆನ್ 2/503]

2. ಜಾಹಿಲೀ ಕಾಲದ ಅರಬಿಗಳು ಸಫರ್ ತಿಂಗಳನ್ನು ಅಶುಭವೆಂದು ಪರಿಗಣಿಸಿದ್ದರು:

ಜಾಹಿಲೀ ಕಾಲದ ಅರಬಿಗಳು ಸಫರ್ ತಿಂಗಳನ್ನು ಅಶುಭವೆಂದು ಪರಿಗಣಿಸುತ್ತಿದ್ದರು. ಇಂದೂ ಕೂಡ ಮುಸ್ಲಿಮರಲ್ಲಿ ಸೇರಿದ ಅನೇಕ ಮಂದಿ ಸಫರ್ ತಿಂಗಳನ್ನು ಅಶುಭವೆಂದು ಪರಿಗಣಿಸುತ್ತಿದ್ದಾರೆ. ಶುಭ ಅಶುಭ ನೋಡುವುದನ್ನು ಇಸ್ಲಾಮ್ ವಿರೋಧಿಸಿದೆ.

ಅಲ್ಲಾಹು ತಆಲಾ ಹೇಳುತ್ತಾನೆ:

﴿ فَإِذَا جَاءَتْهُمُ الْحَسَنَةُ قَالُوا لَنَا هَذِهِ وَإِنْ تُصِبْهُمْ سَيِّئَةٌ يَطَّيَّرُوا بِمُوسَى وَمَنْ مَعَهُ أَلَا إِنَّمَا طَائِرُهُمْ عِنْدَ اللَّهِ وَلَكِنَّ أَكْثَرَهُمْ لَا يَعْلَمُونَ ﴾

**"ಒಳಿತೇನಾದರೂ ಅವರಿಗೆ ಬಂದರೆ ಅವರು ಹೇಳುತ್ತಿದ್ದರು: ಇದು ನಮಗಿರುವುದೇ ಆಗಿದೆ. ಆದರೆ ಅವರಿಗೆ ಕೆಡುಕು ಬಾಧಿಸಿದರೆ ಅವರು ಮೂಸಾ ಮತ್ತು ಅವರೊಂದಿಗಿದ್ದವರನ್ನು ಅಶುಭವೆಂದು ಪರಿಗಣಿಸುತ್ತಿದ್ದರು. ಅರಿತುಕೊಳ್ಳಿರಿ! ಅವರ ಅಶುಭವು ಅಲ್ಲಾಹನ ಬಳಿಯಲ್ಲಿದೆ. ಆದರೆ ಅವರಲ್ಲಿ ಹೆಚ್ಚಿನವರೂ ಅರಿಯುವುದಿಲ್ಲ."** [ಕುರ್‌ಆನ್ 7:131]

﴿ قَالُوا اطَّيَّرْنَا بِكَ وَبِمَنْ مَعَكَ قَالَ طَائِرُكُمْ عِنْدَ اللَّهِ بَلْ أَنْتُمْ قَوْمٌ تُفْتَنُونَ ﴾

**“ಅವರು ಹೇಳಿದರು: ನಿನ್ನಿಂದಾಗಿ ಮತ್ತು ನಿನ್ನೊಂದಿಗೆ ಇರುವವರಿಂದಾಗಿ ನಮಗೆ ಅಶುಭವುಂಟಾಗಿದೆ. ಅವರು (ಸಾಲಿಹ್) ಹೇಳಿದರು: ನಿಮ್ಮ ಅಶುಭವು ಅಲ್ಲಾಹನ ಬಳಿಯಲ್ಲಿದೆ. ಅಲ್ಲ; ನೀವು ಪರೀಕ್ಷಿಸಲ್ಪಟ್ಟ ಒಂದು ಜನತೆಯಾಗಿರುವಿರಿ.”** [ಕುರ್‌ಆನ್ 27:47]

﴿ قَالُوا إِنَّا تَطَيَّرْنَا بِكُمْ لَئِنْ لَمْ تَنْتَهُوا لَنَرْجُمَنَّكُمْ وَلَيَمَسَّنَّكُمْ مِنَّا عَذَابٌ أَلِيمٌ * قَالُوا طَائِرُكُمْ مَعَكُمْ أَئِنْ ذُكِّرْتُمْ بَلْ أَنْتُمْ قَوْمٌ مُسْرِفُونَ ﴾

**“ಅವರು ಹೇಳಿದರು: ನಿಮ್ಮಿಂದಾಗಿ ನಮಗೆ ಅಶುಭವುಂಟಾಗಿದೆ. ನೀವು ನಿಲ್ಲಿಸದಿದ್ದರೆ ಖಂಡಿತವಾಗಿಯೂ ನಾವು ನಿಮ್ಮನ್ನು ಕಲ್ಲೆಸೆದು ಕೊಲ್ಲುವೆವು ಮತ್ತು ಖಂಡಿತವಾಗಿಯೂ ನಮ್ಮ ವತಿಯಿಂದ ನಿಮಗೆ ಯಾತನಾಮಯ ಶಿಕ್ಷೆಯು ಬಾಧಿಸುವುದು. ಅವರು (ಪ್ರವಾದಿಗಳು) ಹೇಳಿದರು: ನಿಮ್ಮ ಅಶುಭವು ನಿಮ್ಮೊಂದಿಗೇ ಇದೆ. ನಿಮಗೆ ಉಪದೇಶ ಮಾಡಲಾದರೆ (ನೀವು ನಮ್ಮನ್ನು ಅಶುಭವೆಂದು ಹೇಳುವುದೇ)? ಅಲ್ಲ ನೀವು ಹದ್ದು ಮೀರಿದ ಒಂದು ಜನತೆಯಾಗಿರುವಿರಿ.”** [ಕುರ್‌ಆನ್ 36:18–19]

ಪ್ರವಾದಿಗಳ ಶತ್ರುಗಳೆಲ್ಲರೂ ಪ್ರವಾದಿಗಳನ್ನು ಅಶುಭವೆಂದು ಪರಿಗಣಿಸಿದ್ದರೆಂದು ಈ ಆಯತ್‌ಗಳು ನಮಗೆ ತಿಳಿಸುತ್ತವೆ. ಅವರ ಈ ಪ್ರವೃತ್ತಿಯನ್ನು ಈ ಆಯತ್‌ಗಳಲ್ಲಿ ಖಂಡಿಸಲಾಗಿರುವುದನ್ನೂ ಕಾಣಬಹುದು. ಸಿದ್ದೀಕ್ ಹಸನ್ ಖಾನ್ ಹೇಳುತ್ತಾರೆ:

وَبِالْجُمْلَةِ ، التَّطَيُّرُ مِنْ عَمَلِ أَهْلِ الْجَاهِلِيَّةِ الْمُشْرِكِينَ ، وَقَدْ ذَمَّهُمُ اللَّهُ تَعَالَى بِهِ ، وَنَهَاهُمْ رَسُولُ اللَّهِ ﷺ ، وَأَخْبَرَ أَنَّهُ شِرْكٌ.

**“ಒಟ್ಟಿನಲ್ಲಿ, ಶುಭ ಮತ್ತು ಅಶುಭವನ್ನು ನೋಡುವುದು ಜಾಹಿಲೀ ಕಾಲದ ಮುಶ್ರಿಕರ ಪ್ರವೃತ್ತಿಯಾಗಿದೆ. ಅಲ್ಲಾಹು ಅವರನ್ನು ಅದಕ್ಕಾಗಿ ಆಕ್ಷೇಪಿಸಿದ್ದಾನೆ.**

**ಪ್ರವಾದಿ(ﷺ)ರವರು ಅವರನ್ನು ವಿರೋಧಿಸಿದ್ದಾರೆ ಮತ್ತು ಅದನ್ನು ಶಿರ್ಕ್ ಎಂದು ಹೇಳಿದ್ದಾರೆ."** [ಅದ್ದೀನುಲ್ ಖಾಲಿಸ್ 2/144]

ಶುಭ ಅಶುಭ ನೋಡುವುದನ್ನು ಅನೇಕ ಹದೀಸ್‌ಗಳ ಮೂಲಕ ಪ್ರವಾದಿ(ﷺ)ರವರು ವಿರೋಧಿಸಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ:

1. ಅಬೂ ಹುರೈರಃ(ರ)ರವರ ಹದೀಸ್:

عَنْ أَبِي هُرَيْرَةَ ﷺ عَنِ النَّبِيِّ ﷺ قَالَ : « لَا عَدْوَى ، وَلَا طِيَرَةَ ، وَلَا صَفَرَ ، وَلَا هَامَةَ »

**"ಅಬೂ ಹುರೈರಃ(ರ)ರವರಿಂದ ವರದಿ. ಪ್ರವಾದಿ(ﷺ)ರವರು ಹೇಳಿದರು: 'ಅದ್ವಾ ಎಂಬುದಿಲ್ಲ; ತಿಯರಃ (ಶುಭ ಅಶುಭವನ್ನು ನೋಡುವುದು) ಎಂಬುದಿಲ್ಲ; ಸಫರ್ ಎಂಬುದಿಲ್ಲ; ಹಾಮಃ ಎಂಬುದಿಲ್ಲ."** [ಅಲ್‌ಬುಖಾರೀ 5715; ಮುಸ್ಲಿಮ್ 2220]

ಇಬ್ನುಲ್ ಕಯ್ಯಿಮ್ ಹೇಳುತ್ತಾರೆ:

وَهَذَا يَحْتَمِلُ أَنْ يَكُونَ نَفْيًا ، وَأَنْ يَكُونَ نَهْيًا ، أَيْ : لَا تَطَيَّرُوا ، وَلَكِنْ قَوْلُهُ ﷺ فِي الْحَدِيثِ : « لَا عَدْوَى ، وَلَا صَفَرَ ، وَلَا هَامَةَ » ، يَدُلُّ عَلَى أَنَّ الْمُرَادَ النَّفْيُ ، وَإِبْطَالُ هَذِهِ الْأُمُورِ الَّتِي كَانَتِ الْجَاهِلِيَّةُ تُعَانِيهَا ، وَالنَّفْيُ فِي هَذَا أَبْلَغُ مِنَ النَّهْيِ ؛ لِأَنَّ النَّفْيَ يَدُلُّ عَلَى بُطْلَانِ ذَلِكَ وَعَدَمِ تَأْثِيرِهِ ، وَالنَّهْيُ إِنَّمَا يَدُلُّ عَلَى الْمَنْعِ مِنْهُ.

**"ತಿಯರಃ ಎಂಬುದಿಲ್ಲ ಎಂದು ಪ್ರವಾದಿ(ﷺ)ರವರು ಹೇಳಿದ್ದು ಬಹುಶಃ ಅದನ್ನು ನಿಷೇಧಿಸುವ ರೂಪದಲ್ಲಾಗಿರಬಹುದು. ಅಥವಾ ವಿರೋಧಿಸುವ ರೂಪದಲ್ಲಾಗಿರಲೂ ಬಹುದು. ಅಂದರೆ ನೀವು ಶುಭ ಮತ್ತು ಅಶುಭವನ್ನು ನೋಡಬೇಡಿ ಎಂಬ ರೂಪದಲ್ಲಿ ಹೇಳಿರಬಹುದು. ಆದರೆ 'ಅದ್ವಾ ಎಂಬುದಿಲ್ಲ; ತಿಯರಃ ಎಂಬುದಿಲ್ಲ; ಸಫರ್ ಎಂಬುದಿಲ್ಲ; ಹಾಮಃ ಎಂಬುದಿಲ್ಲ' ಎಂಬ**

**ಹದೀಸಿನಲ್ಲಿರುವ ಪದಗಳು ಸೂಚಿಸುವ ಪ್ರಕಾರ ಇಲ್ಲಿ ಉದ್ದೇಶಿಸಲಾಗಿರುವುದು ನಿಷೇಧವನ್ನಾಗಿದೆ ಮತ್ತು ಜಾಹಿಲೀ ಕಾಲದ ಜನರು ಅನುಭವಿಸುತ್ತಿದ್ದ ಈ ಕಾರ್ಯಗಳನ್ನು ನಿಷ್ಫಲಗೊಳಿಸುವುದನ್ನಾಗಿದೆ. ಈ ವಿಷಯದಲ್ಲಿರುವ ನಿಷೇಧವು ವಿರೋಧಕ್ಕಿಂತಲೂ ಪ್ರಬಲವಾಗಿದೆ. ಯಾಕೆಂದರೆ ನಿಷೇಧವು ಇದರ ನಿಷ್ಫಲತೆಯನ್ನು ಮತ್ತು ಪರಿಣಾಮರಾಹಿತ್ಯವನ್ನು ಸೂಚಿಸುತ್ತದೆ. ಆದರೆ ವಿರೋಧವು ಸೂಚಿಸುವುದು ಕೇವಲ ತಡೆಯುವುದನ್ನು ಮಾತ್ರವಾಗಿದೆ."** [ಮಿಫ್ತಾಹು ದಾರಿ ಸ್ಸಆದಃ 3/280]

2. ಅಬ್ದುಲ್ಲಾಹ್ ಇಬ್ನ್ ಮಸ್‌ಊದ್(ﷺ)ರವರ ಹದೀಸ್:

عَنِ ابْنِ مَسْعُودٍ ﷺ أَنَّهُ قَالَ: قَالَ رَسُولُ اللَّهِ ﷺ : «الطِّيَرَةُ شِرْكٌ، الطِّيَرَةُ شِرْكٌ، الطِّيَرَةُ شِرْكٌ، ثَلَاثًا، وَمَا مِنَّا إِلَّا، وَلَكِنَّ اللَّهَ يُذْهِبُهُ بِالتَّوَكُّلِ»

**"ಶುಭ ಅಶುಭವನ್ನು ನೋಡುವುದು ಶಿರ್ಕ್ ಆಗಿದೆ. ಶುಭ ಅಶುಭವನ್ನು ನೋಡುವುದು ಶಿರ್ಕ್ ಆಗಿದೆ. ಶುಭ ಅಶುಭವನ್ನು ನೋಡುವುದು ಶಿರ್ಕ್ ಆಗಿದೆ. ನಮ್ಮಲ್ಲಿ ಅದನ್ನು ನೋಡದವರು ಯಾರೂ ಇಲ್ಲ. ಆದರೆ ತವಕ್ಕುಲ್ ಮಾಡುವ ಮೂಲಕ ಅಲ್ಲಾಹು ಅದನ್ನು ನಿವಾರಿಸುತ್ತಾನೆ."** [ಅಬೂ ದಾವೂದ್ 3910 ಮತ್ತು ಅತ್ತಿರ್ಮಿದೀ 1614]

ಇಮಾಮ್ ಅಲ್‌ಬೈಹಕೀ ಹೇಳುತ್ತಾರೆ:

قَالَ الْإِمَامُ أَحْمَدُ رَحِمَهُ اللَّهُ تَعَالَى يُرِيدُ - وَاللَّهُ تَعَالَى أَعْلَم - الطِّيَرَةُ شِرْكٌ عَلَى مَا كَانَ أَهْلُ الْجَاهِلِيَّةِ يَعْتَقِدُونَ فِيهَا، ثُمَّ قَالَ: « وَمَا مِنَّا إِلَّا » يُقَالُ: هَذَا مِنْ قَوْلِ عَبْدِ اللَّهِ ابْنِ مَسْعُودٍ ﷺ وَلَيْسَ مِنْ قَوْلِ النَّبِيِّ ﷺ . وَقَوْلُهُ: « وَمَا مِنَّا إِلَّا » وَقَعَ فِي قَلْبِهِ شَيْءٌ عِنْدَ ذَلِكَ عَلَى مَا جَرَتْ بِهِ الْعَادَةُ، وَقَضَتْ بِهِ التَّجْرِبَةُ، لَكِنَّهُ لَا يُقِرُّ فِيهِ، بَلْ

يُحْسِنُ اعْتِقَادَهُ أَنْ لَا مُدَبِّرِ سِوَى اللَّهِ تَعَالَى ، فَيَسْأَلُ اللَّهَ الْخَيْرَ ، وَيَسْتَعِيذُ بِهِ مِنَ الشَّرِّ ، وَيَمْضِي عَلَى وَجْهِهِ مُتَوَكِّلًا عَلَى اللَّهِ.

**"ಇಮಾಮ್ ಅಹ್ಮದ್ ಹೇಳುತ್ತಾರೆ: ಶುಭ ಅಶುಭವನ್ನು ನೋಡುವುದು ಶಿರ್ಕ್ ಆಗಿದೆ ಎಂದು ಹೇಳುವ ಮೂಲಕ ಪ್ರವಾದಿ(ﷺ)ರವರು ಉದ್ದೇಶಿಸಿದ್ದು ಜಾಹಿಲೀ ಕಾಲದ ಜನರು ಅದರ ಬಗ್ಗೆ ವಿಶ್ವಾಸವಿಡುವುದನ್ನಾಗಿರಬಹುದು. ಹೆಚ್ಚು ಬಲ್ಲವನು ಅಲ್ಲಾಹು ತಆಲಾ ಆಗಿದ್ದಾನೆ. ಅದನ್ನು ಮಾಡದವರು ನಮ್ಮಲ್ಲಿ ಯಾರೂ ಇಲ್ಲ ಎಂಬ ಮಾತು ಪ್ರವಾದಿ(ﷺ)ರವರದ್ದಲ್ಲ ಬದಲಾಗಿ ಇಬ್ನ್ ಮಸ್‌ಊದ್(ﷺ) ರದ್ದಾಗಿದೆಯೆಂದು ಹೇಳಲಾಗುತ್ತದೆ. ಅದನ್ನು ಮಾಡದವರು ನಮ್ಮಲ್ಲಿ ಯಾರೂ ಇಲ್ಲ ಎಂಬುದರ ಅರ್ಥವೇನೆಂದರೆ ರೂಢಿಯನ್ನು ಅವಲಂಬಿಸಿ ಮತ್ತು ಅನುಭವಸಾಕ್ಷಿಯ ಮೂಲಕ ಕೆಲವರ ಹೃದಯದಲ್ಲಿ ಶುಭ ಅಶುಭದ ಬಗ್ಗೆ ಕೆಲವು ಭಾವನೆಗಳಿರುತ್ತವೆ. ಆದರೆ ಅವರು ಅದನ್ನು ಅಂಗೀಕರಿಸುವವರಲ್ಲ. ಬದಲಾಗಿ ಅಲ್ಲಾಹನ ಹೊರತು ಅನ್ಯ ನಿಯಂತ್ರಕರಿಲ್ಲವೆಂದು ಅವರ ಹೃದಯವು ಚೆನ್ನಾಗಿ ಅರಿತುಕೊಂಡಿರುತ್ತದೆ. ಅಂತಹವರು ಅಲ್ಲಾಹನೊಂದಿಗೆ ಒಳಿತನ್ನು ಬೇಡಬೇಕು ಮತ್ತು ಕೆಡುಕಿನಿಂದ ರಕ್ಷೆಯನ್ನು ಬೇಡಬೇಕು. ಅಲ್ಲಾಹನ ಮೇಲೆ ತವಕ್ಕುಲ್ ಮಾಡುತ್ತಾ ತಮ್ಮ ಮಾರ್ಗದಲ್ಲಿ ಮುಂದುವರಿಯಬೇಕು."** [ಶುಅಬುಲ್ ಈಮಾನ್ 2/62]

ಇಮಾಮ್ ಅನ್ನವವೀ ಹೇಳುತ್ತಾರೆ:

أَيْ : اعْتِقَادُ أَنَّهَا تَنْفَعُ أَوْ تَضُرُّ ، إِذْ عَمِلُوا بِمُقْتَضَاهَا مُعْتَقِدِينَ تَأْثِيرَهَا ، فَهُوَ شِرْكٌ ؛ لِأَنَّهُمْ جعَلُوا لَهَا أَثَرًا فِي الْفِعْلِ وَالْإِيجَادِ.

**"ಅಂದರೆ ಶುಭ ಮತ್ತು ಅಶುಭಗಳು ಪ್ರಯೋಜನ ನೀಡುತ್ತವೆ ಮತ್ತು ಹಾನಿಯೊದಗಿಸುತ್ತವೆ ಎಂದು ವಿಶ್ವಾಸವಿಡುವುದು. ಅದರ ಪರಿಣಾಮದ ಮೇಲೆ ವಿಶ್ವಾಸವಿಟ್ಟು ಅದು ಆವಶ್ಯಪಡುವ ಪ್ರಕಾರ ಅಮಲ್ ಮಾಡಿದರೆ ಅದು ಶಿರ್ಕ್**

**ಆಗಿದೆ. ಯಾಕೆಂದರೆ ಅವರು ಕ್ರಿಯೆಯಲ್ಲೂ ಸೃಷ್ಟಿಯಲ್ಲೂ ಅದಕ್ಕೆ ಪರಿಣಾಮವನ್ನು ಉಂಟುಮಾಡಿದ್ದಾರೆ."** [ಶರ್ಹ್ ಮುಸ್ಲಿಮ್ 14/471]

ಅಲ್‌ಹಾಫಿಝ್ ಇಬ್ನ್ ಹಜರ್ ಅಲ್‌ಅಸ್ಕಲಾನೀ ಹೇಳುತ್ತಾರೆ:

وَإِنَّمَا جَعَلَ ذَلِكَ شِرْكًا لِاعْتِقَادِهِمْ أَنَّ ذَلِكَ يَجْلِبُ نَفْعًا أَوْ يَدْفَعُ ضَرًّا ، فَكَأَنَّهُمْ أَشْرَكُوهُ مَعَ اللَّهِ تَعَالَى.

**"ಅದನ್ನು (ಶುಭ ಮತ್ತು ಅಶುಭ ನೋಡುವುದನ್ನು) ಶಿರ್ಕ್ ಎಂದು ಕರೆದಿರುವುದೇಕೆಂದರೆ ಅದು ಪ್ರಯೋಜನವನ್ನು ತರುತ್ತದೆ ಮತ್ತು ಹಾನಿಯನ್ನು ತಡೆಯುತ್ತದೆಂದು ಅವರು ನಂಬಿದ್ದರು. ಇದು ಅದನ್ನು ಅಲ್ಲಾಹನೊಂದಿಗೆ ಸಹಭಾಗಿಯನ್ನಾಗಿ ಮಾಡುವಂತೆಯಾಗಿದೆ."** [ಫತ್‌ಹುಲ್ ಬಾರಿ 10/213]

ಸಿದ್ದೀಕ್ ಹಸನ್ ಖಾನ್ ಹೇಳುತ್ತಾರೆ:

وَهَذَا صَرِيحٌ فِي تَحْرِيمِ الطِّيَرَةِ ، وَأَنَّهَا مِنَ الشِّرْكِ ؛ لِمَا فِيهِ مِنْ تَعَلُّقِ الْقَلْبِ بِغَيْرِ اللَّهِ.

**"ಶುಭ ಮತ್ತು ಅಶುಭವನ್ನು ನೋಡುವುದು ಹರಾಮ್ ಆಗಿದೆ ಮತ್ತು ಅದು ಶಿರ್ಕ್ ಆಗಿದೆಯೆಂಬುದಕ್ಕೆ ಇದು ಸ್ಪಷ್ಟ ಪುರಾವೆಯಾಗಿದೆ. ಯಾಕೆಂದರೆ ಅದರಲ್ಲಿ ಹೃದಯವು ಅಲ್ಲಾಹೇತರರಲ್ಲಿ ಸೇರಿಕೊಳ್ಳುವುದು ಇದೆ."** [ಅದ್ದೀನುಲ್ ಖಾಲಿಸ್ 2/142]

ಇಬ್ನ್ ಉಸೈಮೀನ್ ಹೇಳುತ್ತಾರೆ:

وَاعْلَمْ أَنَّ التَّطَيُّرَ يُنَافِي التَّوْحِيدَ ، وَوَجْهُ مُنَافَاتِهِ لَهُ مِنْ وَجْهَيْنِ : الْأَوَّلُ : أَنَّ الْمُتَطَيِّرَ قَطَعَ تَوَكُّلَهُ عَلَى اللَّهِ وَاعْتَمَدَ عَلَى غَيْرِهِ ، الثَّانِي : أَنَّهُ تَعَلَّقَ بِأَمْرٍ لَا حَقِيقَةَ لَهُ ؛ فَأَيُّ رَابِطٍ بَيْنَ هَذَا الْأَمْرِ وَبَيْنَ مَا يَحْصُلُ لَكَ ؟ ! وَهَذَا لَا شَكَّ أَنَّهُ يُخِلُّ بِالتَّوْحِيدِ ؛ لِأَنَّ

التَّوْحِيدَ عِبَادَةٌ وَاسْتِعَانَةٌ ، قَالَ تَعَالَى : { إِيَّاكَ نَعْبُدُ وَإِيَّاكَ نَسْتَعِينُ } [ الْفَاتِحَةُ : 5 ] ، إِذَنْ فَالطِّيَرَةُ مُحَرَّمَةٌ ، وَهِيَ مُنَافِيَةٌ لِلتَّوْحِيدِ كَمَا سَبَقَ

**"ಅರಿತುಕೋ! ಶುಭ ಮತ್ತು ಅಶುಭವನ್ನು ನೋಡುವುದು ತೌಹೀದನ್ನು ನಿಷೇಧಿಸುತ್ತದೆ. ಈ ನಿಷೇಧಕ್ಕಿರುವ ಕಾರಣವು ಎರಡು ರೀತಿಯಲ್ಲಿದೆ: ಒಂದು: ಶುಭ ಮತ್ತು ಅಶುಭವನ್ನು ನೋಡುವವನು ಅಲ್ಲಾಹನ ಮೇಲಿರುವ ಭರವಸೆಯನ್ನು ಕಡಿದು ಅಲ್ಲಾಹೇತರರ ಮೇಲೆ ಅವಲಂಬಿತನಾಗುತ್ತಾನೆ. ಎರಡು: ವಾಸ್ತವವಲ್ಲದ ಒಂದು ವಿಷಯವನ್ನು ಅವನು ಅವಲಂಬಿಸುತ್ತಾನೆ. ಶುಭ ಮತ್ತು ಅಶುಭಕ್ಕೂ ನಿನಗೆ ಸಂಭವಿಸುವ ಲಾಭ ಮತ್ತು ಹಾನಿಗೂ ಎಲ್ಲಿಯ ಸಂಬಂಧ? ಇದು ತೌಹೀದ್‌ನಲ್ಲಿ ಬಿರುಕು ಮೂಡಿಸುತ್ತದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಯಾಕೆಂದರೆ ತೌಹೀದ್ ಆರಾಧನೆ ಮತ್ತು ಸಹಾಯ ಯಾಚನೆಯಾಗಿದೆ. ಅಲ್ಲಾಹು ಹೇಳುತ್ತಾನೆ: "ನಿನ್ನನ್ನು ಮಾತ್ರ ನಾವು ಆರಾಧಿಸುತ್ತೇವೆ ಮತ್ತು ನಿನ್ನೊಂದಿಗೆ ಮಾತ್ರ ನಾವು ಸಹಾಯ ಬೇಡುತ್ತೇವೆ." ಆದ್ದರಿಂದ ಶುಭ ಮತ್ತು ಅಶುಭವನ್ನು ನೋಡುವುದು ನಿಷಿದ್ಧವಾಗಿದೆ. ಈಗಾಗಲೇ ವಿವರಿಸಿದಂತೆ ಅದು ತೌಹೀದನ್ನು ನಿಷೇಧಿಸುತ್ತದೆ."** [ಅಲ್‌ಕೌಲುಲ್ ಮುಫೀದ್ ಅಲಾ ಕಿತಾಬಿ ತ್ತೌಹೀದ್ 2/77–78]

3. ಇಮ್ರಾನ್ ಇಬ್ನ್ ಹುಸೈನ್(ﷺ)ರವರ ಹದೀಸ್:

عَنْ عِمْرَانَ بْنِ حُصَيْنٍ ﷺ قَالَ : قَالَ رَسُولُ اللَّهِ ﷺ : «لَيْسَ مِنَّا مَنْ تَطَيَّرَ أَوْ تُطُيِّرَ لَهُ».

**"ಇಮ್ರಾನ್ ಇಬ್ನ್ ಹುಸೈನ್(ﷺ)ರಿಂದ ವರದಿ. ಅವರು ಹೇಳುತ್ತಾರೆ: ಪ್ರವಾದಿ(ﷺ)ರವರು ಹೇಳಿದರು: ಶುಭ ಮತ್ತು ಅಶುಭವನ್ನು ನೋಡುವವನು ಮತ್ತು ಶುಭ ಮತ್ತು ಅಶುಭವನ್ನು ನೋಡಿಸುವವನು ನಮ್ಮಲ್ಲಿ (ಮುಸ್ಲಿಮರಲ್ಲಿ) ಸೇರಿದವನಲ್ಲ."** [ಅಲ್‌ಬುಖಾರೀ 3578]

# ಶುಭ ಮತ್ತು ಅಶುಭವನ್ನು ನೋಡುವುದರಲ್ಲಿರುವ ಅಪಾಯಗಳು

ಶುಭ ಮತ್ತು ಅಶುಭವನ್ನು ನೋಡುವುದು ಜಾಹಿಲೀ ಕಾಲದ ವಿಶ್ವಾಸಗಳಲ್ಲಿ ಸೇರಿದ್ದಾಗಿದೆ. ದುರದೃಷ್ಟವಶಾತ್, ಬಹುಪಾಲು ಅಜ್ಞಾನಿ ಮುಸ್ಲಿಮರಲ್ಲಿ ಇದು ಹರಡಿಕೊಂಡಿದೆ. ಇದು ಅವರಿಗೆ ಧರ್ಮದ ಬಗ್ಗೆಯಿರುವ ಅಜ್ಞಾನದಿಂದ ಮತ್ತು ತೌಹೀದ್‌ನ ವಿಶ್ವಾಸವು ಅವರ ಹೃದಯದಲ್ಲಿ ದುರ್ಬಲವಾಗಿರುವುದರಿಂದ ಉಂಟಾಗಿದೆ. ಅವರಲ್ಲಿ ಅಜ್ಞಾನ, ತೌಹೀದ್‌ನ ವಿಶ್ವಾಸಕ್ಕೆ ವಿರುದ್ಧವಾದ ನಂಬಿಕೆ ಮತ್ತು ವಿಶ್ವಾಸದ ದೌರ್ಬಲ್ಯ ಉಂಟಾಗಲು ಕಾರಣ ಅವರ ಮಧ್ಯೆ ಇಸ್ಲಾಮಿನ ಶಿಕ್ಷಣಗಳು ಸರಿಯಾದ ರೂಪದಲ್ಲಿ ಜರುಗದಿರುವುದು ಮತ್ತು ಬಿದ್‌ಅತ್ತಿನ ಹಾಗೂ ಪಥಭ್ರಷ್ಟತೆಯ ಜನರೊಂದಿಗೆ ಅವರು ಕೂಡಿಕೊಂಡಿರುವುದಾಗಿದೆ. ಅವರಿಗೆ ನೇರಮಾರ್ಗವನ್ನು ಕಲಿಸಿ ಕೊಡುವವರು ಮತ್ತು ಅವರು ಏನನ್ನು ನಂಬಬೇಕು, ಏನನ್ನು ನಂಬಬಾರದು, ಇಸ್ಲಾಮಿನಿಂದ ಹೊರತಳ್ಳುವ ಹಿರಿಯ ಶಿರ್ಕ್ ಯಾವುದು, ಕಿರಿಯ ಶಿರ್ಕ್ ಯಾವುದು, ಶಿರ್ಕ್‌ನೆಡೆಗೆ ಕೊಂಡೊಯ್ಯುವ ಮಾರ್ಗಗಳು ಯಾವುವು ಇತ್ಯಾದಿಗಳ ಬಗ್ಗೆ ಅರಿವು ಮೂಡಿಸುವವರ ಸಂಖ್ಯೆಯು ಕಡಿಮೆಯಾಗಿರುವುದು ಇದಕ್ಕಿರುವ ಇನ್ನೊಂದು ಕಾರಣವಾಗಿದೆ.

ಜನರಲ್ಲಿ ಹೆಚ್ಚಿನವರೂ ಸಫರ್ ತಿಂಗಳನ್ನು ಅಶುಭವೆಂದು ಪರಿಗಣಿಸುತ್ತಾರೆ. ಅವರು ಅದರಲ್ಲಿ ಪ್ರಯಾಣ ಮಾಡುವುದಿಲ್ಲ, ಶುಭಕಾರ್ಯವನ್ನು ನಡೆಸುವುದಿಲ್ಲ, ಸಂತೋಷಕೂಟಗಳನ್ನು ಆಚರಿಸುವುದಿಲ್ಲ. ತಿಂಗಳ ಕೊನೆಯನ್ನು ತಲುಪಿದರೆ ಕೊನೆಯ ಬುಧವಾರದಂದು ಜನರನ್ನು ಒಟ್ಟುಗೂಡಿಸಿ ಸಿಹಿತಿಂಡಿ ಹಂಚಿ ಆಚರಣೆ ಮಾಡುತ್ತಾರೆ. ಇದು ಕಾಯಿಲೆಗಳನ್ನು ವಾಸಿ ಮಾಡುತ್ತದೆಯೆಂಬ ನಂಬಿಕೆಯೂ ಅವರಿಗಿದೆ.

ಇದು ಶಿರ್ಕ್‌ನಲ್ಲಿ ಬೀಳಿಸುವ ಅಜ್ಞಾನವಾಗಿದೆಯೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ವಿಶ್ವಾಸವು ಭದ್ರವಾಗಿಲ್ಲ ಎಂಬುದಕ್ಕೆ ಇದೊಂದು ಸೂಚನೆಯಾಗಿದೆ. ಯಾರ ವಿಶ್ವಾಸವು ಕೆಲವು ಶಿರ್ಕ್‌ಗಳೊಂದಿಗೆ ಮಿಶ್ರವಾಗಿದೆಯೋ ಅವರಿಂದಲೇ ಹೊರತು ಇದು ಸಂಭವಿಸದು.

ಆದರೆ ಯಾರಿಗೆ ಅಲ್ಲಾಹು ಭದ್ರವಾದ ವಿಶ್ವಾಸವನ್ನು ದಯಪಾಲಿಸಿ ಅನುಗ್ರಹಿಸಿದ್ದಾನೋ ಅವರು ಎಲ್ಲ ಸಂದರ್ಭಗಳಲ್ಲೂ ಅಲ್ಲಾಹನ ಮೇಲೆ ತವಕ್ಕುಲ್ ಮಾಡುತ್ತಾರೆ. ಅವನನ್ನು ಮಾತ್ರ ಅವಲಂಬಿಸಿಕೊಳ್ಳುತ್ತಾರೆ. ಯಾಕೆಂದರೆ ಶುಭ ಮತ್ತು ಅಶುಭವನ್ನು ನೋಡುವುದು, ಅಲ್ಲಾಹೇತರರು ಪ್ರಯೋಜನ ಮತ್ತು ಹಾನಿಯನ್ನು ಒದಗಿಸುತ್ತಾರೆಂದು ನಂಬುವುದು ಮೊದಲಾದ ವಿಷಯಗಳು ಅನ್ಯಾಯಗಳಲ್ಲೇ ಅತಿಕಠೋರವಾಗಿರುವ ಅನ್ಯಾಯವಾಗಿರುವ ಶಿರ್ಕ್ ಆಗಿದೆಯೆಂದು ಅವರಿಗೆ ಗೊತ್ತಿದೆ.

## ಸಫರ್ ತಿಂಗಳಲ್ಲಿ ವ್ಯಾಪಕವಾಗಿ ಆಚರಿಸಲಾಗುವ ಕೆಲವು ಬಿದ್‌ಅತ್‌ಗಳು

1. ಸಫರ್ ತಿಂಗಳ ಕೊನೆಯ ಬುಧವಾರ ಮಾಡುವ ಬಿದ್‌ಅತ್:

ಅಲ್ಲಜ್ನತು ದ್ದಾಇಮಃ ಫತ್ವಾ ಸಮಿತಿಯೊಂದಿಗೆ ಕೇಳಲಾಯಿತು:

“ಸಫರ್ ತಿಂಗಳ ಕೊನೆಯ ಬುಧವಾರದಂದು ದುಹಾ ಸಮಯದಲ್ಲಿ ನಿರ್ವಹಿಸಬೇಕಾದ ಒಂದು ಐಚ್ಛಿಕ ನಮಾಝ್ ಇದೆಯೆಂದು ನಮ್ಮ ಊರಿನಲ್ಲಿರುವ ಕೆಲವು ಉಲಮಾಗಳು ವಾದಿಸುತ್ತಾರೆ. ಈ ನಮಾಝ್ ನಾಲ್ಕು ರಕ್‌ಅತ್‌ಗಳಿದ್ದು, ಎಲ್ಲ ರಕ್‌ಅತ್‌ನಲ್ಲೂ ಸೂರಃ ಅಲ್‌ಫಾತಿಹಃ ಪಾರಾಯಣ ಮಾಡಿದ ಬಳಿಕ ಸೂರಃ ಅಲ್‌ಕೌಸರ್ (17 ಬಾರಿ); ಸೂರಃ ಅಲ್‌ಇಖ್ಲಾಸ್ (50 ಬಾರಿ); ಸೂರಃ ಅಲ್‌ಫಲಕ್ ಮತ್ತು ಸೂರಃ ಅನ್ನಾಸ್ (ಒಂದೊಂದು ಬಾರಿ) ಪಾರಾಯಣ ಮಾಡುತ್ತಾರೆ. ಸಲಾಮ್ ಹೇಳಿದ ಬಳಿಕ “ವಲ್ಲಾಹು

ಗಾಲಿಬುನ್ ಅಲಾ ಅಮ್ರಿಹೀ ವಲಾಕಿನ್ನ ಅಕ್ಸರನ್ನಾಸಿ ಲಾ ಯಅ್‌ಲಮೂನ್" ಎಂದು 360 ಬಾರಿ ಪಾರಾಯಣ ಮಾಡುತ್ತಾರೆ. ಇದರ ನಂತರ ಜೌಹರುಲ್ ಕಲಾಮ್ 3 ಬಾರಿ ಪಾರಾಯಣ ಮಾಡಿ ಕೊನೆಗೆ ಸುಬ್‌ಹಾನ ರಬ್ಬಿಕ ರಬ್ಬಿಲ್ ಇಝ್ಝತಿ ಅಮ್ಮಾ ಯಸಿಫೂನ್, ವಸಲಾಮುನ್ ಅಲಲ್ ಮುರ್ಸಲೀನ್, ವಲ್‌ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್ ಎಂದು ಹೇಳುತ್ತಾರೆ. ಇದರ ಬಳಿಕ ರೊಟ್ಟಿ ಮೊದಲಾದ ಆಹಾರ ವಸ್ತುಗಳನ್ನು ಬಡವರಿಗೆ ಹಂಚುತ್ತಾರೆ. ಸಫರ್ ತಿಂಗಳ ಕೊನೆಯ ಬುಧವಾರದಂದು ಇಳಿಯುವ ವಿಪತ್ತುಗಳನ್ನು ತಡೆಯುವುದಕ್ಕಾಗಿ ಇದನ್ನು ಮಾಡಬೇಕೆಂದು ಅವರು ಹೇಳುತ್ತಾರೆ. ಅವರು ವಾದಿಸುವ ಪ್ರಕಾರ ಪ್ರತಿ ವರ್ಷ 3,20,000 ವಿಪತ್ತುಗಳು ಎರಗುತ್ತವೆ. ಅವೆಲ್ಲವೂ ಎರಗುವುದು ಸಫರ್ ತಿಂಗಳ ಕೊನೆಯ ಬುಧವಾರ. ಆ ದಿನವು ವರ್ಷದ ದಿನಗಳಲ್ಲೇ ಅತ್ಯಂತ ಅಶುಭ ದಿನ. ಆದ್ದರಿಂದ ಯಾರಾದರೂ ಮೇಲೆ ವಿವರಿಸಿದಂತೆ ನಮಾಝ್ ಮಾಡಿದರೆ ಅಲ್ಲಾಹು ಅವನ ಔದಾರ್ಯದಿಂದ ಈ ದಿನದಲ್ಲಿ ಎರಗುವ ಎಲ್ಲ ವಿಪತ್ತುಗಳಿಂದಲೂ ರಕ್ಷಿಸುತ್ತಾನೆ."

ಉತ್ತರ: ಪ್ರಶ್ನೆಯಲ್ಲಿ ಹೇಳಲಾದ ಈ ಐಚ್ಛಿಕ ನಮಾಝ್‌ಗೆ ಕುರ್‌ಆನ್‌ನಲ್ಲಾಗಲಿ, ಸುನ್ನತ್‌ನಲ್ಲಾಗಲಿ ಯಾವುದೇ ಆಧಾರವಿರು ವುದಾಗಿ ನಮಗೆ ತಿಳಿದಿಲ್ಲ. ಈ ಸಮುದಾಯದ ಪೂರ್ವಿಕರು ಅಥವಾ ಸಜ್ಜನರು ಇಂತಹ ಒಂದು ನಮಾಝ್ ನಿರ್ವಹಿಸಿದ್ದಾಗಿ ದೃಢಪಟ್ಟಿಲ್ಲ. ಬದಲಾಗಿ ಇದೊಂದು ಬಿದ್‌ಅತ್ ಆಗಿದೆ. ಪ್ರವಾದಿ(ﷺ)ರವರು ಹೇಳಿದರು:

«مَنْ عَمِلَ عَمَلًا لَيْسَ عَلَيْهِ أَمْرُنَا فَهُوَ رَدٌّ»

**"ನಮ್ಮ ಆಜ್ಞೆಯಿಲ್ಲದ ಒಂದು ಕರ್ಮವನ್ನು ಯಾರಾದರೂ ಮಾಡಿದರೆ ಅದು ತಿರಸ್ಕೃತವಾಗಿದೆ."**

ಇನ್ನೊಂದು ವರದಿಯಲ್ಲಿ ಹೀಗಿದೆ:

« مَنْ أَحْدَثَ فِي أَمْرِنَا هَذَا مَا لَيْسَ مِنْهُ فَهُوَ رَدٌّ »

**“ನಮ್ಮ ಈ ಧರ್ಮದ ವಿಷಯದಲ್ಲಿ ಅದರಲ್ಲಿಲ್ಲದ ಒಂದನ್ನು ಯಾರಾದರೂ ಹೊಸದಾಗಿ ನಿರ್ಮಿಸಿದರೆ ಅದು ತಿರಸ್ಕೃತವಾಗಿದೆ.”** [ಅಲ್‌ಬುಖಾರೀ 2550; ಮುಸ್ಲಿಮ್ 1718]

ಇಲ್ಲಿ ಉಲ್ಲೇಖಿಸಲಾದ ಈ ನಮಾಝನ್ನು ಪ್ರವಾದಿ(ﷺ)ರವರು ಅಥವಾ ಸಹಾಬಾಗಳು ನಿರ್ವಹಿಸಿದ್ದಾರೆಂದು ಯಾರಾದರೂ ಹೇಳಿದರೆ ಅವನು ಅತಿದೊಡ್ಡ ಸುಳ್ಳನ್ನು ಹೇಳಿದ್ದಾನೆ. ಸುಳ್ಳು ಹೇಳುವವರಿಗೆ ನೀಡಲಾಗುವ ಯೋಗ್ಯ ಶಿಕ್ಷೆಯನ್ನು ಅಲ್ಲಾಹು ಅವನಿಗೆ ನೀಡುವನು.” [ಫತಾವ ಲ್ಲಜ್ನತಿ ದ್ದಾಇಮಃ 2/354; ಸಂಖ್ಯೆ 1619]

2. ಸಫರ್ ತಿಂಗಳಲ್ಲಿ ಮದುವೆಯಾಗದಿರುವುದು ಮತ್ತು ಮುಂಜಿ ಮಾಡದಿರುವುದು:

ಅಲ್ಲಜ್ನ ದ್ದಾಇಮಃ ಫತ್ವಾ ಸಮಿತಿಯೊಂದಿಗೆ ಕೇಳಲಾಯಿತು:

“ಸಫರ್ ತಿಂಗಳಲ್ಲಿ ಮದುವೆ, ಮುಂಜಿ ಮೊದಲಾದ ಶುಭ ಕಾರ್ಯಗಳನ್ನು ನಡೆಸಬಾರದೆಂದು ಕೆಲವರು ಹೇಳುತ್ತಾರೆ. ಇಸ್ಲಾಮೀ ಶರೀಅತ್ತಿನ ಪ್ರಕಾರ ಇದನ್ನು ವಿವರಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.”

ಉತ್ತರ: ಮದುವೆ, ಮುಂಜಿ ಮೊದಲಾದ ಶುಭ ಕಾರ್ಯಗಳನ್ನು ಸಫರ್ ತಿಂಗಳಲ್ಲಿ ಮಾಡಬಾರದೆಂಬ ನಂಬಿಕೆಯು ಸಫರ್ ತಿಂಗಳು ಅಶುಭವೆಂಬ ನಂಬಿಕೆಯಿಂದ ಉದ್ಭವಿಸಿದ್ದಾಗಿದೆ. ತಿಂಗಳುಗಳನ್ನು, ದಿನಗಳನ್ನು, ಹಕ್ಕಿ ಮೊದಲಾದ ಪ್ರಾಣಿಗಳನ್ನು ಅಶುಭವೆಂದು ಪರಿಗಣಿಸುವುದು ಇಸ್ಲಾಮಿಗೆ ವಿರುದ್ಧವಾಗಿದೆ. ಯಾಕೆಂದರೆ ಅಲ್‌ಬುಖಾರೀ ಮತ್ತು ಮುಸ್ಲಿಮ್ ಉದ್ಧರಿಸಿದ ಹದೀಸಿನಲ್ಲಿ ಪ್ರವಾದಿ(ﷺ)ರವರು ಹೇಳುತ್ತಾರೆ:

« لَا عَدْوَى ، وَلَا طِيَرَةَ ، وَلَا هَامَةَ ، وَلَا صَفَرَ »

**“ಅದ್ವಾ ಎಂಬುದಿಲ್ಲ; ತಿಯರಃ ಎಂಬುದಿಲ್ಲ; ಹಾಮಃ ಎಂಬುದಿಲ್ಲ; ಸಫರ್ ಎಂಬುದಿಲ್ಲ.”**

ಸಫರ್ ತಿಂಗಳನ್ನು ಅಶುಭವೆಂದು ಪರಿಗಣಿಸುವುದು ಶುಭ ಮತ್ತು ಅಶುಭವನ್ನು ನೋಡುವ ನಿಷಿದ್ಧ ಪ್ರವೃತ್ತಿಯಲ್ಲಿ ಸೇರಿದ್ದಾಗಿದೆ. ಇದು ಜಾಹಿಲೀ ಕಾಲದ ಪ್ರವೃತ್ತಿಯಾಗಿದೆ. ಇಸ್ಲಾಮ್ ಇದನ್ನು ಅಳಿಸಿಹಾಕಿದೆ.” [ಫತಾವ ಲ್ಲಜ್ನತಿ ದ್ದಾಇಮಃ 1/450; ಸಂಖ್ಯೆ 10775]

ಮಾತ್ರವಲ್ಲ, ಪ್ರವಾದಿ(ﷺ)ರವರು ಸಫರ್ ತಿಂಗಳಲ್ಲಿ ಉಮ್ಮುಲ್ ಮುಅ್‌ಮಿನೀನ್ ಖದೀಜಾ(ؓ)ರವರನ್ನು ವಿವಾಹವಾಗಿದ್ದರು. ಅದೇ ತಮ್ಮ ಪುತ್ರಿ ಫಾತಿಮಾ(ؓ)ರವರ ಇದೇ ತಿಂಗಳಲ್ಲಿ ಅಲೀ(ؓ)ರವರಿಗೆ ವಿವಾಹ ಮಾಡಿಕೊಟ್ಟಿದ್ದರು. ಇದರ ಬಗ್ಗೆ ಮುಂದೆ ವಿವರಿಸಲಾಗುವುದು.

3. ಸಫರ್ ತಿಂಗಳಲ್ಲಿ ವಿಶೇಷ ಪ್ರಾರ್ಥನೆ:

ಅಲ್ಲಜ್ನತು ದ್ದಾಇಮಃ ಫತ್ವಾ ಸಮಿತಿಯೊಂದಿಗೆ ಕೇಳಲಾಯಿತು:

“ನಮ್ಮಲ್ಲಿ ಕೆಲವರು ಸಫರ್ ತಿಂಗಳಲ್ಲಿ ಒಂದು ವಿಶೇಷ ಪ್ರಾರ್ಥನೆಯನ್ನು ಪ್ರಾರ್ಥಿಸುತ್ತಾರೆ. ಅದನ್ನು ಕರಪತ್ರಗಳಲ್ಲಿ ಮುದ್ರಿಸಿ ಹಂಚುತ್ತಾರೆ. ಅದು ಹೀಗಿದೆ:

اللَّهُمَّ بِسِرِّ الْحَسَنِ وَأَخِيهِ وَجَدِّهِ وَأَبِيهِ ، اكْفِنَا شَرَّ هَذَا الْيَوْمِ وَمَا يَنْزِلُ فِيهِ يَا كَافِي فَسَيَكْفِيكَهُمُ اللَّهُ وَهُوَ السَّمِيعُ الْعَلِيمُ ، وَحَسْبُنَا اللَّهُ وَنِعْمَ الْوَكِيلُ ، وَلَا حَوْلَ وَلَا قُوَّةَ إِلَّا بِاللَّهِ الْعَلِيِّ الْعَظِيمِ . اَللَّهُمَّ إِنَّا نَسْأَلُكَ بِأَسْمَائِكَ الْحُسْنَى ، وَبِكَلِمَاتِكَ التَّامَّاتِ ، وَبِحُرْمَةِ نَبِيِّكَ سَيِّدِنَا مُحَمَّدٍ ﷺ أَنْ تَحْفَظَنَا ، وَأَنْ تُعَافِيَنَا مِنْ بَلَائِكَ ، يَا دَافِعَ الْبَلَايَا ، يَا مُفَرِّجَ الْهَمِّ ، وَيَا كَاشِفَ الْغَمِّ ، اكْشِفْ عَنَّا مَا كُتِبَ عَلَيْنَا فِي هَذِهِ السَّنَةِ مِنْ هَمٍّ أَوْ غَمٍّ ، إِنَّكَ عَلَى كُلِّ شَيْءٍ قَدِيرٌ

ಈ ಪ್ರಾರ್ಥನೆಯ ಬಗ್ಗೆ ನಮಗೆ ತಿಳಿಸಿಕೊಡಬೇಕೆಂದು ನಾವು ವಿನಂತಿಸುತ್ತಿದ್ದೇವೆ.

ಉತ್ತರ: ಇದೊಂದು ಬಿದ್‌ಅತ್ ಆಗಿರುವ ಪ್ರಾರ್ಥನೆ. ಯಾಕೆಂದರೆ ಇದನ್ನು ಒಂದು ನಿರ್ದಿಷ್ಟ ಸಮಯದಲ್ಲಿ ಪ್ರಾರ್ಥಿಸಲಾಗುತ್ತದೆ. ಮಾತ್ರವಲ್ಲ, ಇದರಲ್ಲಿ ಹಸನ್ ಮತ್ತು ಹುಸೈನ್‌ರ ಮೂಲಕ ತವಸ್ಸುಲ್ ಮಾಡುವುದು, ಪ್ರವಾದಿ(ﷺ)ರವರ ಹುರ್ಮತ್ ಮತ್ತು ಜಾಹ್ ಮೂಲಕ ತವಸ್ಸುಲ್ ಮಾಡುವುದು ಮತ್ತು ಅಲ್ಲಾಹನಾಗಲಿ ಅವನ ಪ್ರವಾದಿಯಾಗಲಿ ಅಲ್ಲಾಹನಿಗೆ ನೀಡದ ಹೆಸರುಗಳ ಮೂಲಕ ಅವನನ್ನು ಕರೆಯುವುದು ಮೊದಲಾದ ವಿಚಾರಗಳು ಇವೆ. ಅಲ್ಲಾಹು ಅವನ ಗ್ರಂಥದಲ್ಲಿ ಮತ್ತು ಪ್ರವಾದಿ(ﷺ)ರವರು ಸುನ್ನತ್ತಿನಲ್ಲಿ ಅವನಿಗೆ ನೀಡದ ಹೆಸರುಗಳಿಂದ ಅವನನ್ನು ಕರೆಯುವುದಕ್ಕೆ ಅನುಮತಿಯಿಲ್ಲ. ಪ್ರಾರ್ಥಿಸುವಾಗ ಕೆಲವು ವ್ಯಕ್ತಿಗಳ ಮೂಲಕ, ಅವರ ಸ್ಥಾನಮಾನಗಳ ಮೂಲಕ ತವಸ್ಸುಲ್ ಮಾಡಿ ಪ್ರಾರ್ಥಿಸುವುದು ಬಿದ್‌ಅತ್ ಆಗಿದೆ. ಎಲ್ಲ ಬಿದ್‌ಅತ್‌ಗಳೂ ಪಥಭ್ರಷ್ಟತೆಯಾಗಿವೆ ಮತ್ತು ಶಿರ್ಕ್‌ನೆಡೆಗೆ ಕೊಂಡೊಯ್ಯುವ ಮಾಧ್ಯಮಗಳಾಗಿವೆ. ಇಂತಹ ಕರಪತ್ರಗಳನ್ನು ಹಂಚುವುದನ್ನು ತಡೆಯುವುದು ಮತ್ತು ಅವುಗಳನ್ನು ನಾಶ ಮಾಡುವುದು ಕಡ್ಡಾಯವಾಗಿದೆ. ಇದು ಪಥಭ್ರಷ್ಟ ಶಿಯಾಗಳ ಕೃತ್ಯವೆಂದು ಕಂಡುಬರುತ್ತದೆ." [ಫತಾವ ಲ್ಲಜ್ನತಿ ದ್ದಾಇಮಃ 1/187; ಸಂಖ್ಯೆ 20316]

4. ಸಫರ್ ತಿಂಗಳ ಆರನೇ ದಿನ ಬಲಿ ನೀಡುವುದು:

ಅಲ್ಲಜ್ನತು ದ್ದಾಇಮಃ ಫತ್ವಾ ಸಮಿತಿಯೊಂದಿಗೆ ಕೇಳಲಾಯಿತು:

"ವರ್ಷದ ನಿರ್ದಿಷ್ಟ ದಿನಗಳಲ್ಲಿ ಮತ್ತು ನಿರ್ದಿಷ್ಟ ಸಮಯದಲ್ಲಿ ಬಲಿ ನೀಡುವುದರ ವಿಧಿಯೇನು? ರಜಬ್ 27ರಂದು, ಸಫರ್ 6ರಂದು, ಶವ್ವಾಲ್ 15ರಂದು ಮತ್ತು ಮುಹರ್ರಮ್ 10ರಂದು ಬಲಿ ನೀಡುವುದು ಪುಣ್ಯಕರ್ಮವೆಂದು ಹೆಚ್ಚಿನ ಜನರು ನಂಬುತ್ತಾರೆ. ಈ ಕರ್ಮಗಳು

ಸ್ವೀಕರಿಸಲ್ಪಡುವುದೇ? ಸುನ್ನತ್ತಿನಲ್ಲಿ ಇದಕ್ಕೆ ಪುರಾವೆಯಿದೆಯೇ? ಅಥವಾ ಇದು ಇಸ್ಲಾಮ್ ಧರ್ಮಕ್ಕೆ ವಿರುದ್ಧವಾಗಿರುವ ಬಿದ್‌ಅತ್ ಆಗಿದೆಯೇ?"

ಉತ್ತರ: ಇಬಾದತ್‌ಗಳು ಮತ್ತು ಇತರೆಲ್ಲ ಪುಣ್ಯಕರ್ಮಗಳು ತೌಕೀಫಿಯ್ಯಃ (ಅಂದರೆ ಸ್ಪಷ್ಟ ಪುರಾವೆಯ ಆಧಾರದಲ್ಲಿ ಮಾಡಲಾಗುವ ಕರ್ಮಗಳು) ಆಗಿವೆ. ಶರೀಅತ್ತಿನ ಮೂಲಕವಲ್ಲದೆ ಇದನ್ನು ನಿರ್ಧರಿಸಲು ಸಾಧ್ಯವಿಲ್ಲ. ಮೇಲೆ ಹೇಳಲಾದ ದಿನಗಳನ್ನು ಬಲಿ ನೀಡುವ ಮೂಲಕ ಪ್ರತ್ಯೇಕಗೊಳಿಸುವುದು ಕುರ್‌ಆನ್ ಅಥವಾ ಸುನ್ನತ್ತಿನಲ್ಲಿ ದೃಢಪಟ್ಟಿಲ್ಲ. ಸಹಾಬಾಗಳಲ್ಲಿ ಯಾರಾದರೂ ಇದನ್ನು ಮಾಡಿದ್ದಾಗಿ ತಿಳಿದು ಬಂದಿಲ್ಲ. ಆದ್ದರಿಂದ ಇದು ಹೊಸದಾಗಿ ನಿರ್ಮಿಸಲಾದ ಬಿದ್‌ಅತ್ ಆಗಿದೆ. ಪ್ರವಾದಿರವರು ಹೇಳಿದರು:

« مَنْ أَحْدَثَ فِي أَمْرِنَا هَذَا مَا لَيْسَ مِنْهُ فَهُوَ رَدٌّ »

**"ನಮ್ಮ ಈ ಧರ್ಮದ ವಿಷಯದಲ್ಲಿ ಅದರಲ್ಲಿಲ್ಲದ ಒಂದನ್ನು ಯಾರಾದರೂ ಹೊಸದಾಗಿ ನಿರ್ಮಿಸಿದರೆ ಅದು ತಿರಸ್ಕೃತವಾಗಿದೆ."** [ಅಲ್‌ಬುಖಾರೀ 2550; ಮುಸ್ಲಿಮ್ 1718]

[ಫತಾವ ಲ್ಲಜ್ನತಿ ದ್ದಾಇಮಃ 3/53; ಸಂಖ್ಯೆ 7465]

## ಸಫರ್ ತಿಂಗಳಲ್ಲಿ ಜರುಗಿದ ಕೆಲವು ವಿಶೇಷ ಘಟನೆಗಳು

1. ಅಬವಾಅ್ ಯುದ್ಧ: ಅಬವಾಅ್ ಯುದ್ಧಕ್ಕಾಗಿ ಪ್ರವಾದಿ(ﷺ)ರವರು ಹೊರಟದ್ದು ಸಫರ್ ತಿಂಗಳ 12 ರಂದು. [ಉಯೂನುಲ್ ಅಸರ್ 1/295]

2. ಖೈಬರ್ ವಿಜಯ: ಖೈಬರ್ ವಿಜಯವು ಉಂಟಾದದ್ದು ಸಫರ್ ತಿಂಗಳಲ್ಲಿ. [ತಹ್ಝೀಬ್ ಸೀರತಿ ಇಬ್ನಿ ಹಿಶಾಮ್ 1/334]

3. ಅಮ್ರ್ ಇಬ್ನುಲ್ ಆಸ್(ﷺ), ಖಾಲಿದ್ ಇಬ್ನುಲ್ ವಲೀದ್(ﷺ) ಮತ್ತು ಉಸ್ಮಾನ್ ಇಬ್ನ್ ತಲ್ಹಃ(ﷺ) ಇಸ್ಲಾಮ್ ಸ್ವೀಕರಿಸಿದ್ದು ಸಫರ್ ತಿಂಗಳಲ್ಲಿ. [ಅಲ್‌ಮುಅ್‌ಜಮುಲ್ ಕಬೀರ್ 9/61]

4. ಪ್ರವಾದಿ(ﷺ)ರವರ ಹಿಜ್ರಾ: ಪ್ರವಾದಿ(ﷺ)ರವರು ಮಕ್ಕಾದಿಂದ ಹೊರಟದ್ದು ಸಫರ್ ತಿಂಗಳಲ್ಲಿ ಮತ್ತು ಮದೀನಾ ತಲುಪಿದ್ದು ರಬೀಉಲ್ ಅವ್ವಲ್ ತಿಂಗಳಲ್ಲಿ. [ಸಿಫತು ಸ್ಸಫ್ವಃ 1/125]

5. ಖದೀಜಾ(ﷺ)ರವರ ವಿವಾಹ: ಪ್ರವಾದಿ(ﷺ)ರವರು ಖದೀಜಾ ಬಿನ್ತ್ ಖುವೈಲಿದ್(ﷺ)ರನ್ನು ವಿವಾಹವಾದದ್ದು ಸಫರ್ ತಿಂಗಳಲ್ಲಿ. [ಸುಬುಲುಲ್ ಹುದಾ ವರ್ರಶಾದ್ 2/165]

6. ಫಾತಿಮಾ(ﷺ)ರವರ ವಿವಾಹ: ಪ್ರವಾದಿ(ﷺ)ರವರು ಫಾತಿಮಾ(ﷺ) ರವರನ್ನು ಅಲೀ ಇಬ್ನ್ ಅಬೀ ತಾಲಿಬ್(ﷺ)ರವರಿಗೆ ವಿವಾಹ ಮಾಡಿಕೊಟ್ಟದ್ದು ಹಿಜರಿ 2ನೇ ವರ್ಷ ಸಫರ್ ತಿಂಗಳಲ್ಲಿ. [ಅಸ್ಸೀರತು ನ್ನಬವಿಯ್ಯಃ 4/611]

7. ರೋಮ್ ಯುದ್ಧ: ಹಿಜರಿ 11 ನೇ ವರ್ಷದ ಸಫರ್ 26ರಂದು ಪ್ರವಾದಿ(ﷺ)ರವರು ರೋಮ್ ಯುದ್ಧಕ್ಕಾಗಿ ಹೊರಡಲು ಆಜ್ಞಾಪಿಸಿದರು. [ಅಲ್‌ಮುನ್ತಕಾ ಮಿನ್ ಸೀರತಿಲ್ ಮುಸ್ತಫಾ 1/82]

ಒಟ್ಟಿನಲ್ಲಿ, ಸಫರ್ ತಿಂಗಳು ಅಶುಭವಲ್ಲ, ಬದಲಾಗಿ ಇತರೆಲ್ಲ ತಿಂಗಳುಗಳಂತೆ ಅದು ಕೂಡ ಅಲ್ಲಾಹು ಸೃಷ್ಟಿಸಿದ ಒಂದು ತಿಂಗಳಾಗಿದೆ ಎಂದು ತಿಳಿದು ಬರುತ್ತದೆ. ಪ್ರವಾದಿ(ﷺ)ರವರು ಈ ತಿಂಗಳಲ್ಲಿ ವಿವಾಹವಾಗಿರುವುದು, ವಿವಾಹ ಮಾಡಿಕೊಟ್ಟಿರುವುದು, ಯುದ್ಧ ಮಾಡಿರುವುದು ಇತ್ಯಾದಿಗಳು ಈ ತಿಂಗಳು ಅಶುಭವಲ್ಲ ಎಂಬುದಕ್ಕೆ ಪ್ರಬಲ ಪುರಾವೆಗಳಾಗಿವೆ.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلى آلِهِ وَصَحْبِهِ أَجْمَعِين .

*********